# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038

ಸಂಪುಟ:02 • ಸಂಚಿಕೆ: 48 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 15.08.2024 • ಗುರುವಾರ • ಪುಟ:04 • ಬೆಲೆ:2
Volume:02 • Issue: 48 • PRGI No:KARKAN/2023/88055 • VIJAYANAGARA • 15.08.2024 • Thursday • Page:04 • Rs:2



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ



No.1 Leading in Local News Paper
80,000
HAMPI TIMES E-PAPER READERS
94486 33038 | NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201





ಹೊಸಪೇಟೆ ಹೊರವಲಯದ ಶ್ರೀ ಶನೇಶ್ವರ ದೇವಸ್ಥಾನದಲ್ಲಿ ದಿನಾಂಕ 17-08-2024 ರಂದು ಶ್ರಾವಣ ಶುದ್ಧ ತ್ರಯೋದಶಿ ಶನಿವಾರದಂದು

ಶ್ರೀ ಶನಿದೇವರ ಪ್ರತಿಷ್ಠಾಪಿಸಿದ 27ನೇ ವಾರ್ಷಿಕೋತ್ಸವ ಸಮಾರಂಭ

ಆ.16 ರಾತ್ರಿ ಪುರಾಣ ಪ್ರವಚನ | ಆ.17ರ ಬೆಳಿಗ್ಗೆ ಗಂಗಾಪೂಜೆ ಶನಿದೇವರಿಗೆ ತೈಲಾಭಿಷೇಕ, ಫಲ-ಪಂಚಾಮೃತ ಅಭಿಷೇಕ, ವಿಶೇಷ ಪುಷ್ಪಲಂಕಾರ

ಧರ್ಮ ಸಭೆ ಬೆಳಗ್ಗೆ 11-00 ಗಂಟೆಗೆ, ಸಾನ್ನಿಧ್ಯ ಶ್ರೀಮನ್ ಉಜ್ಜಯಿನಿ ಸದ್ಧರ್ಮ ಸಿಂಹಸನಾಧೀಶ್ವರ ಶ್ರೀಶ್ರೀಶ್ರೀ 1008 ಜಗದ್ಗುರು ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು

ನೇತೃತ್ವ: ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನ ಮಠದ ಶ್ರೀಮನ್.ನಿ.ಪ್ರ.ಜಗದ್ಗರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು

M: 9448795049, 8762397479

ಸರ್ವರಿಗೂ ಸ್ವಾಗತ ಕೋರುವವರು: ಶ್ರೀ ಶನೇಶ್ವರ ದೇವಸ್ಥಾನ ಸಮಿತಿ (ರಿ), ಪಂಚಾಚಾರ್ಯನಗರ, ರಾಷ್ಟ್ರೀಯ ಹೆದ್ದಾರಿ 50, ಹೊಸಪೇಟೆ, ವಿಜಯನಗರ ಜಿಲ್ಲೆ




# ಜನರ ಅಹವಾಲುಗಳಿಗೆ ತಕ್ಷಣವೇ ಸ್ಪಂದಿಸಿ

## ಹೊಸಪೇಟೆಯಲ್ಲಿ ಜಿಲ್ಲಾ ಮಟ್ಟದ ಜನಸ್ಪಂದನ | ಸಚಿವ ಜಮೀರ್‌ಅಹ್ಮದ್‌ಖಾನ್ ಅಧಿಕಾರಿಗಳಿಗೆ ಖಡಕ್ ಸೂಚನೆ

**ಹಂಪಿ ಟೈಮ್ಸ್ ಹೊಸಪೇಟೆ**

ಜನಸ್ಪಂದನ ಕಾರ್ಯಕ್ರಮದಲ್ಲಿ ಸ್ವೀಕೃತವಾದ ಸಾರ್ವಜನಿಕರ ಅರ್ಜಿ, ಅಹವಾಲುಗಳಿಗೆ ತಕ್ಷಣವೇ ಸ್ಪಂಧಿಸಿ ಪರಿಹಾರ ನೀಡಲು ಕ್ರಮ ವಹಿಸುವಂತೆ ವಸತಿ, ವಕ್ಫ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಜೆಡ್.ಜಮೀರ್ ಅಹ್ಮದ್‌ಖಾನ್ ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಿಜಯನಗರ ಜಿಲ್ಲಾಡಳಿತ ಹಾಗೂ ಹೊಸಪೇಟೆ ನಗರಸಭೆ ಸಹಯೋಗದಲ್ಲಿ ನಗರದ ಜಿಲ್ಲಾ ಒಳಾಂಗಣ ಕ್ರೀಡಾಂಗಣದ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಳ್ಳಲಾದ ಜಿಲ್ಲಾ ಮಟ್ಟದ ಜನಸ್ಪಂದನ ಕಾರ್ಯಕ್ರಮ ಉದ್ಘಾಟಿಸಿ ಸಾರ್ವಜನಿಕರಿಂದ ಅರ್ಜಿ ಸ್ವೀಕರಿಸಿ ಅಹವಾಲುಗಳನ್ನು ಆಲಿಸಿ, ಮಾತನಾಡಿದರು.

ಸಾರ್ವಜನಿಕರ ಸಮಸ್ಯೆಗಳಿಗೆ ತ್ವರಿತ ಪರಿಹಾರದ ಜೊತೆಗೆ ಸಕಾಲದಲ್ಲಿ ಸೇವೆಗಳು ಸಿಗುವ ನಿಟ್ಟಿನಲ್ಲಿ ನಮ್ಮ ಸರ್ಕಾರವು ಜನಸ್ಪಂದನ ಕಾರ್ಯಕ್ರಮನ್ನು ಹಮ್ಮಿಕೊಂಡಿದೆ. ಜನಸ್ಪಂದನ ಕಾರ್ಯಕ್ರಮದಲ್ಲಿ ಸ್ವೀಕೃತವಾಗುವ ಸಾರ್ವಜನಿಕ ಅಹವಾಲುಗಳಿಗೆ ಎಲ್ಲಾ ಇಲಾಖೆಗಳ ಅಧಿಕಾರಿಗಳು ತ್ವರಿತವಾಗಿ ಸ್ಪಂಧಿಸುವದರ



ಮೂಲಕ ಸಮಸ್ಯೆಗಳಿಗೆ ಶೀಘ್ರ ಪರಿಹಾರಕ್ಕೆ ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು. ಅಂದಾಗ ಮಾತ್ರ ಈ ಕಾರ್ಯಕ್ರಮಕ್ಕೆ ಮಹತ್ವ ಬರುತ್ತದೆ. ಯಾವುದೇ ಅರ್ಜಿಗಳನ್ನು ಬಾಕಿ ಉಳಿಸಿಕೊಳ್ಳದೇ ಅವುಗಳನ್ನು ಮತ್ತು ಸಾರ್ವಜನಿಕರ ಕುಂದುಕೊರತೆಗಳನ್ನು ಶೀಘ್ರವಾಗಿ ಪರಿಹರಿಸುವ ಕೆಲಸವಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಶಾಸಕರುಗಳಾದ ಹೆಚ್.ಆರ್. ಗವಿಯಪ್ಪ, ಡಾ.ಶ್ರೀನಿವಾಸ ಎನ್.ಟಿ. ಹಾಗೂ ಎಂ.ಪಿ. ಲತಾ ಮಲ್ಲಿಕಾರ್ಜುನ, ವಸತಿ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಮತ್ತು ವಿಜಯನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ನವೀನ್‌ರಾಜ್ ಸಿಂಗ್, ವಿಜಯನಗರ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ್, ಜಿಪಂ ಸಿಇಒ ನೋಂಗ್ಜಾಯ್ ಮೊಹ್ಮದ್ ಅಲಿ ಅಕ್ರಂ ಶಾ,

>>4

### ವಸತಿ ರಹಿತರಿಗೆ ಮನೆ ಒದಗಿಸಲು ಕ್ರಮ

ರಾಜ್ಯ ಸರ್ಕಾರವು 5 ಗ್ಯಾರೆಂಟಿ ಯೋಜನೆಗಳಗಾಗಿ 55 ರಿಂದ 60 ಸಾವಿರ ಕೋಟಿ ರೂ.ಗಳನ್ನು ಖರ್ಚು ಮಾಡುತ್ತಿದೆ. ಇದರ ನಡುವೆ ಸರ್ಕಾರವು ವಸತಿ ರಹಿತರಿಗೆ ಮನೆಗಳನ್ನು ಒದಗಿಸಲು ರಾಜ್ಯದ ವಸತಿ ಯೋಜನೆಗಳಿಗೆ ರೂ. 9,500 ಕೋಟಿ ಅನುದಾನ ನೀಡಿದೆ. ಈ ಹಿನ್ನೆಲೆಯಲ್ಲಿ ಫೆಬ್ರವರಿ ಮಾಹೆಯಲ್ಲಿ 36 ಸಾವಿರಕ್ಕೂ ಅಧಿಕ ಮನೆಗಳನ್ನು ಮಂಜೂರು ಮಾಡಲಾಗಿದ್ದು, ಮುಂದಿನ ತಿಂಗಳಲ್ಲಿ 35,200 ಕ್ಕೂ ಅಧಿಕ ಮನೆಗಳನ್ನು ನೀಡುತ್ತದ್ದೇವೆ. ನಮ್ಮ ಸರ್ಕಾರದ ಅವಧಿಯಲ್ಲಿ ಸುಮಾರು 2 ಲಕ್ಷಕ್ಕೂ ಹೆಚ್ಚು ಫಲನಾಭವಿಗಳಿಗೆ ಮನೆ ನಿರ್ಮಿಸಿ ಹಸ್ತಾಂತರ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರು ಹೇಳಿದರು.


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
Place your ads here reach more readers
No. 1 ಸ್ಥಳೀಯ ದಿನಪತ್ರಿಕೆ
Why Choose Us?
- Experienced Professionals
- Fast and Reliable Service
- Customized Solutions
- Competitive Pricing

E-mail: hampitimes@gmail.com
www.hampitimes.com
epaper.hampitimes.com
9448633038


## ಆ.15 ಡ್ಯಾಂಗೆ ಪ್ರವಾಸಿಗರ ಪ್ರವೇಶ ನಿರ್ಬಂಧ

**ಹಂಪಿ ಟೈಮ್ಸ್ ಹೊಸಪೇಟೆ**

ತುಂಗಭದ್ರಾ ಅಣೆಕಟ್ಟಿನ ಗೇಟ್ ಸಂಖ್ಯೆ 19ರ ಪುನಃ ಸ್ಥಾಪನೆ ಕಾರ್ಯ ಪ್ರಗತಿಯಲ್ಲಿದ್ದು, ಆಗಸ್ಟ್ 15ರ ಸ್ವತಂತ್ರ್ಯ ದಿನಾಚರಣೆಯಂದು ಮತ್ತು ಪುನಶ್ಚೇತನ ಕಾರ್ಯವು ಪೂರ್ಣ ಗೊಳ್ಳುವವರೆಗೆ ಪ್ರವಾಸಿಗರಿಗೆ ತುಂಗಭದ್ರಾ ಅಣೆಕಟ್ಟಿಗೆ ನಿರ್ಬಂಧವಿರುತ್ತದೆ ಎಂದು ಟಿಬಿ ಮಂಡಳಿಯ ಕಾರ್ಯದರ್ಶಿ ತಿಳಿಸಿದ್ದಾರೆ.







## ವಿಜ್ಞಾನ

### ಆಹಾರ ಪ್ಯಾಕ್ ಮಾಡಲು ಏಕೆ ಅಲ್ಯೂಮಿನಿಯಂ ಫಾಯಿಲ್‌ನ್ನು ಬಳಸಲಾಗುತ್ತದೆ?

■ ಆರ್.ಬಿ.ಗುರುಬಸವರಾಜ

ತಂದೆ ರಾತ್ರಿ ಊಟದ ನಂತರ ಅಂಗಡಿಯಿಂದ ಪಾನ್ ಬೀಡಾ ತಂದರು. ಅದನ್ನು ಮಮ್ಮಿಗೆ ನೀಡಿದರು. ಮಮ್ಮಿ ಅದರ ಮೇಲಿದ್ದ ಅಲ್ಯುಮಿನಿಯಂ ಹಾಳೆ ತೆಗೆಯಲು ಪ್ರಯತ್ನಿಸುತ್ತಿದ್ದರು. ಅಲ್ಲಿಗೆ ಬಂದ ವೈಶಾಲಿ "ಅಮ್ಮಾ ಅದನ್ನು ತೆಗೆಯಬೇಡ. ಹಾಗೆಯೇ ತಿನ್ನು" ಎಂದಳು. 'ಏನು, ಅಲ್ಯುಮಿನಿಯಂ ಹಾಳೆ ತೆಗೆಯದೇ ಹಾಗೆಯೇ ತಿನ್ನಬೇಕಾ. ಅದು ಹೊಟ್ಟೆಯೊಳಗೆ ಹೋಗಲ್ವಾ?' ಎಂದಳು ಮಮ್ಮಿ. "ಅದನ್ನು ತಿಂದ್ರೆ ಏನೂ ಆಗಲ್ಲ, ತಿನ್ನು ಮಮ್ಮಿ" ಎಂದಳು ವೈಶಾಲಿ. ಮಮ್ಮಿ ಅದನ್ನು ತೆಗೆಯದೇ ಹಾಗೆ ತಿನ್ನುತ್ತಾ 'ಇಂತಹ ಆಹಾರ ಪದಾರ್ಥಗಳನ್ನು ಪ್ಯಾಕ್ ಮಾಡಲು ಏಕೆ ಅಲ್ಯುಮಿನಿಯಂ ಫಾಯಿಲ್ ಬಳಸುತ್ತಾರೆ?' ಎಂದಳು. ವೈಶಾಲಿ ಅದರ ಬಗ್ಗೆ ಮಮ್ಮಿಗೆ ವಿವರಿಸಿದಳು.

ಅಲ್ಯೂಮಿನಿಯಂ ಫಾಯಿಲ್‌ನ ವಿಶಿಷ್ಟ ಗುಣಲಕ್ಷಣಗಳು ಆಹಾರ ಪ್ಯಾಕೇಜಿಂಗ್‌ಗೆ ಸೂಕ್ತವಾದ ವಸ್ತುವಾಗಿದೆ. ಆಹಾರವನ್ನು ಪ್ಯಾಕಿಂಗ್ ಮಾಡಲು ಅಲ್ಯೂಮಿನಿಯಂ ಫಾಯಿಲ್‌ನ್ನು ಬಳಸುವುದಕ್ಕೆ ಕೆಲವು



ಕಾರಣಗಳು ಹೀಗಿವೆ. ಮೊದಲನೆಯದು ಅಲ್ಯೂಮಿನಿಯಂ ಫಾಯಿಲ್ ಆಹಾರ ಪದಾರ್ಥಗಳಿಗೆ ರಕ್ಷಣಾ ಗೋಡೆಯಿದ್ದಂತೆ. ಆಮ್ಲಜನಕ, ಬೆಳಕು, ತೇವಾಂಶ ಮತ್ತು ಬ್ಯಾಕ್ಟೀರಿ ಯಾಗಳ ಒಳನುಸುಳುವಿಕೆಯನ್ನು ತಡೆಗಟ್ಟಿ ಆಹಾರವನ್ನು ಹಾಳಾಗುವಿಕೆ ಮತ್ತು ಮಾಲಿನ್ಯದಿಂದ ರಕ್ಷಿಸುತ್ತದೆ.

ಎರಡನೆಯದಾಗಿ ಅಲ್ಯೂಮಿನಿಯಂ ಫಾಯಿಲ್ ಹೆಚ್ಚಿನ ಉಷ್ಣ ವಾಹಕತೆಯನ್ನು ಹೊಂದಿದೆ. ಇದು ಶಾಖವನ್ನು ಸಮವಾಗಿ ಮತ್ತು ತ್ವರಿತವಾಗಿ ವಿತರಿಸಲು ಅನುವು ಮಾಡಿಕೊಡುತ್ತದೆ. ಓವನ್ ಮತ್ತು ಮೈಕ್ರೋವೇವ್‌ಗಳಲ್ಲಿ ಆಹಾರವನ್ನು ಪ್ಯಾಕಿಂಗ್ ಮಾಡಲು ಮತ್ತು ಪುನಹ ಬಿಸಿಮಾಡಲು ಸೂಕ್ತವಾಗಿದೆ.

ಮೂರನೆಯದಾಗಿ ಅಲ್ಯೂಮಿನಿಯಂ ಫಾಯಿಲ್‌ನ್ನು ವಿವಿಧ ಗಾತ್ರಗಳ ಮತ್ತು ಆಕಾರಗಳ ಆಹಾರ ಪದಾರ್ಥಗಳನ್ನು ಸುತ್ತುವಂತೆ ಸುಲಭವಾಗಿ ಮಡಚಬಹುದು ಮತ್ತು ಪ್ಯಾಕ್ ಮಾಡಬಹುದು. ನಾಲ್ಕನೆಯದಾಗಿ ಅಲ್ಯೂಮಿನಿಯಂ ಫಾಯಿಲ್ ಉತ್ತಮವಾದ ಸಾಮರ್ಥ್ಯ ಹೊಂದಿದ್ದು, ಹೆಚ್ಚು ಕಾಲ ಬಾಳಿಕೆ ಬರುವಂತಹದ್ದಾಗಿದೆ. ಸಾರಿಗೆ ಮತ್ತು ಶೇಖರಣೆಯ ಸಮಯದಲ್ಲಿ ಮೇಲ್ಮೈ ಹಾನಿಯಿಂದ ಆಹಾರವನ್ನು ರಕ್ಷಿಸಲು ಸಹಾಯ ಮಾಡುತ್ತದೆ. ಕೊನೆಯದಾಗಿ ಇದು ಇತರ ಪ್ಯಾಕೇಜಿಂಗ್ ವಸ್ತುಗಳಿಗೆ ಹೋಲಿಸಿದರೆ ತುಲನಾತ್ಮಕವಾಗಿ ಅಗ್ಗವಾಗಿದೆ. ಎಲ್ಲಾ ಆಹಾರ ಪ್ಯಾಕೇಜಿಂಗ್‌ಗೆ ಕೈಗೆಟುಕುವ ಬೆಲೆಯುಳ್ಳದ್ದಾಗಿದೆ.

### ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

### ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

### ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಭಾರತ ಸರ್ವಧರ್ಮ ಸಹಿಷ್ಣುತೆಯ ಮಡಿಲು

ಎ ದೇಶ ಹೈ ಹೀರಾ ಸೋನೆ ಕಿ.ಸಬ್ ಸೆ ಸುಂದರ್ ದೇಶ ಹಮಾರಾ... ಭಾರತ ದೇಶ ಅಂದರೆ ಹಾಗೆನೆ 140 ಕೋಟಿ ಭಾರತೀಯ ಭಾವನೆಗಳಿಗೆ ಭರವಸೆಯ ಬೀಡಿದು... ಇಲ್ಲಿ ಪ್ರಜೆಗಳ ಹಿತದೃಷ್ಟಿಯಿಂದ ಸರಕಾರ ನಡೆಯುತ್ತದೆ, ಪ್ರಜೆಗಳೇ ಪ್ರಭುಗಳು, ನಮ್ಮ ಸಂವಿಧಾನ "ಸರ್ವೋಜನಾಂಗ ಸುಖಿನೋಭವತ್ತು"ಎಂಬ ತಳಹತಿಯ ಮೇಲೆ ನಿಂತಿದೆ, ಇಲ್ಲಿ ಜಾತಿ ಭೇದ, ಮೇಲು ಕೀಳು ಯಾವುದಕ್ಕೂ ಆಸ್ಪದ ಕೊಡದೆ ಪ್ರಜೆಗಳು ಅಂದರೆ ಸರಕಾರ, ಸರಕಾರ ಅಂದರೆ ಪ್ರಜೆಗಳು ಎನ್ನುವ ಮನೋಧೋರಣೆ ಇರುವುದರಿಂದ ಸರ್ವ ಧರ್ಮಿಯರು ಇರುವ ಭಾರತೀಯ ದೇಶದಲ್ಲಿ ಶಾಂತಿ ಸಮಾಧಾನ ಸಮೃದ್ಧಿ ಸಂಪತ್ತು ಪ್ರಗತಿ ಇದೆ. ನಾವು ಬೇರೆ ದೇಶಗಳ ಬಗ್ಗೆ ನೋಡಿದಾಗ "ಭಾರತ್ ಮುಲ್ಕ್ ಎಕ್ ಐಸಾ ದೇಶ ಹೈ ಜೋ ಜನತಾಕೆ ಲಿಯೇ ಹಿ ಹೈ "ಪ್ರಜೆಗಳಿಂದ ಚುನಾಯಿತ ಸರಕಾರ ಪ್ರಜೆಗಳ ಹಿತದೃಷ್ಟಿ ಬಯಸುತ್ತದೆ.

ಚುನಾಯಿತ ಸರಕಾರ ಅಧಿಕಾರಕ್ಕೆ ಬಂದ ಕೂಡಲೆ ಎಲ್ಲವನ್ನು ಮನಬಂದಂತ್ತೆ ನಡೆಸಲು ಸಾಧ್ಯವಿಲ್ಲ. ಅಂತೆಯೇ ಇಲ್ಲಿ ಪ್ರಜೆಗಳ ಹಿತದೃಷ್ಟಿ ಮುಖ್ಯವಾಗಿ ಪರಿಗಣಿಸಲಾಗುತ್ತದೆ. ಪ್ರಜೆಗಳ ಬಗ್ಗೆ ಗೌರವ ಸರಕಾರಕ್ಕೆ ಇರಬೇಕು, ಇಲ್ಲ ಅಂದರೆ ಬಾಂಗ್ಲಾ ದೇಶದ ಪ್ರಧಾನಿಯ ಒಂದೇ ಒಂದು ಹೇಳಿಕೆ ಇಡೀ ದೇಶವೆ ಧಗ ಧಗ ಉರಿಯುವಂತ್ತೆ ಕಿಚ್ಚು ಹತ್ತಿಕೊಂಡಿದೆ. ಪ್ರಜೆಗಳ ಹಿತದೃಷ್ಟಿ, ಪ್ರಜೆಗಳನ್ನು ಗೌರವಿಸುವುದು ಸರಕಾರದ ಕರ್ತವ್ಯ ಅಲ್ಲವೇ.. ಪ್ರಜೆಗಳನ್ನು "ರಜಾಕಾರರು" ಎಂದು ಉಪಚರಿಸಿದ್ದು ತಪ್ಪು ತಾನೆ... ಎಲ್ಲರನ್ನು ಸಮಾನವಾಗಿ ಕಾಣಬೇಕು...ಬಾಂಗ್ಲಾದೇಶದ ಒಟ್ಟು ಜನಸಂಖ್ಯೆ 17 ಕೋಟಿ, ಇದರಲ್ಲಿ ಶೇಕಡಾ 8 ಹಿಂದೂಗಳು ಇದಾರೆ.

ಬಾಂಗ್ಲಾ ದೇಶದ ಗಡಿಯಲ್ಲಿ ನಮ್ಮ ಹಿಂದೂಗಳ ಕೂಗು ಕರಳು ಕಿತ್ತು ಬರುವಂತಿದೆ, ಗಡಿ ಭಾಗದಲ್ಲಿ ನಿಂತ್ತು ಕೊಂಡು" ಹಮೆ ಅಂದರ್ ಆನೆದೋ"(ಭಾರತದಲ್ಲಿ ಪ್ರವೇಶ ಕೊಡಿ ) ಎಂದು ನಮ್ಮ ಗಡಿಯಲ್ಲಿರುವ ಯೋದ್ಧರಿಗೆ ಪರಿ ಪರವಾಗಿ ಕೇಳುತ್ತಿರುವ ದೃಶ್ಯ...ಯೊದ್ಧರು ಏನು ಮಾಡ ಕ್ಕಾಡುತ್ತೆ?ಪ್ರಜೆಗಳು ತಿರುಗಿ ಬಿದ್ದಪರೆ ಮುಗಿತು ಅದು ಯಾವ ಸರಕಾರ ವಾದರೂ ಸರಿ, ಯಾವ ಪ್ರಧಾನಿ ಯಾದರೂ ಸರಿ. ಸಂವಿಧಾನ ವ್ಯವಸ್ಥೆ ದೇಶದ ಸರ್ವರಿಗೂ ಸಮಾನತೆ ಯನ್ನು ಕಲ್ಪಿಸಬೇಕು. ಬಾಂಗ್ಲಾದೇಶದಲ್ಲಿ ಆಗಿದ್ದು ಇದೆ ಮೀಸಲಾತಿ ಕಿಚ್ಚು, ಮೀಸಲಾತಿಯು ಒಂದು ಸಮುದಾಯದ ಆರ್ಥಿಕತೆ, ಶಿಕ್ಷಣ, ಬಡತನ, ಅನ್ಯಾಯಕ್ಕೆ ಒಳ್ಳಪಟ್ಟವರು, ಸಮಾಜ ದಿಂದ ತಳಲ್ಪಟ್ಟ ವರಿಗಾಗಿ ವಿಶೇಷ ಅವಕಾಶ ಸ್ಥಾನ ಮಾನ ಕೊಟ್ಟು, ಅವರನ್ನು ಮೇಲಕ್ಕೆತರುವುದು. ಬಾಂಗ್ಲಾದೇಶ ದಲ್ಲಿ ಸ್ವತಂತ್ರ ಹೋರಾಟಗಾರಗಿಗೆ ಕೊಟ್ಟಿರುವ ಮೀಸಲಾತಿ ಸ್ವಾಗತಾರ್ಹ, ಆದರೆ ಮುಂದೆ ಅವರ ಪೀಳಿಗೆಗೆ ಕೊಟ್ಟಿರುವುದು ಸರಿಯೇ? ಶೇಕಡಾ 55 ರಷ್ಟು ಮೀಸಲಾತಿಯಲ್ಲಿ ಸ್ವತಂತ್ರ ಹೋರಾಟಗಾರರಕುಟುಂಬಕ್ಕೆ,ಮಹಿಳೆಯರಿಗೆ,ಅಲ್ಪಸಂಖ್ಯಾತರಿಗೆ... ಕೊಟ್ಟಾಗ ಉಳಿದ 54% ರಷ್ಟು ಮೀಸಲಾತಿ ನಿಜವಾಗಲೂ ಪ್ರತಿಭಾವಂತರಿಗೆ ಅವಕಾಶ ಇಲ್ಲದೆ, ನಿರುದ್ಯೋಗ ಸಮಸ್ಯೆ ಹೆಚ್ಚಾಗಿದ್ದು ಉನ್ನತ ಶಿಕ್ಷಣ ಪಡೆದ ಯುವಕರು ಕಂಗಲಾಗಿದ್ದಾರೆ.



ನಂದಿನಿ ಸನಬಾಲ್
ಶಿಕ್ಷಕಿ, ಗುಲ್ಬರ್ಗಾ

Scan For Digital Colourful
HAMPI TIMES E-paper



ಯುವಜನತೆಗೆ ಪ್ರೋತ್ಸಾಹ, ಯೋದ್ಯೋಗವಕಾಶ ಕಲ್ಪಿಸುವುದು ಸರಕಾರದ ಜವಾಬ್ದಾರಿ. ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಯೂನಿವರ್ಸಿಟಿಗಳಲ್ಲೂ ವಿದ್ಯಾರ್ಥಿಗಳ ಆಕ್ರೋಶ ವ್ಯಕ್ತವಾಗುತ್ತೀರುವುದು ಆತಂಕದ ಹುಟ್ಟಿಸಿದೆ. ಒಂದು ದೇಶದ ಜನತೆಗೆ ತನ್ನ ದೇಶ ಹಾಗೂ ದೇಶದ ಬಗ್ಗೆ ಅಭಿಮಾನ, ಗೌರವ ಇರಬೇಕಾದರೆ ಅಲ್ಲಿನ ಸಂವಿಧಾನ ಹಾಗೂ ಸರಕಾರದ ಮೇಲೆ ಅವಲಂಬಿತಾವಾಗುತ್ತದೆ. ಇಲ್ಲಿ ಸರಕಾರ ಪ್ರಜೆಗಳ ವಿರುದ್ದ ಮೀಸಲಾತಿ ನೀಡುತ್ತೀದ್ದರೆ ಇದು ಪ್ರಜಾಪ್ರಭುತ್ವಕ್ಕೆ ವಿರೋಧ. ಇನ್ನೂ ಕೇಲವು ದೇಶಗಳಲ್ಲಿ ವರ್ಷಗಟ್ಟಲೆ ಯುದ್ಧಗಳು, ಬಾಂಬ್ ದಾಳಿ, ಕ್ಷಿಪಣಿ ದಾಳಿಗಳು, ಆಂತರಿಕ ಕಲಹಗಳು ನಡಿಯುತ್ತಲೆ ಇವೆ. ಭಾರತ ದೇಶ ವಿಶಾಲವಾಗಿದ್ದು, ಅಪಾರ ಸನಸಂಖ್ಯೆ ಹಿಂದಿದೆ, ಹಲವು ಧರ್ಮಗಳು, ನೂರಾರು ಜಾತಿಗಳು, ನೂರಾರು ಭಾಷೆಗಳು, ನೂರಾರು ಸಂಪ್ರದಾಯಗಳು, ವಿವಿಧ ಸಂಸ್ಕೃತಿ, ಉಡುಗೆ ತೋಡಿಗೆ ಹೀಗೆ ಹಲವಾರು ವಿವಿಧತೆಗಳ ನಡುವೆಯೂ ನಾವೆಲ್ಲರೂ ಒಂದೆ, ನಾವು ಭಾರತೀಯರು ಎನ್ನುವ ಕೊಂಡಿಯನ್ನು ಜೋಡಿಸಿದ್ದು ನಮ್ಮ ಸಂವಿಧಾನ. ನಮ್ಮ ದೇಶದಲ್ಲಿ ಸುಖ, ಶಾಂತಿ, ಸಂಪತ್ತು,ಸಮೃದ್ಧಿ, ನೆಮ್ಮದಿ ಎಲ್ಲವೂ ಇದೆ. ನಮ್ಮ ದೇಶದಲ್ಲಿ ಯಾವ ಸರಕಾರ ಅಧಿಕಾರದಲ್ಲಿದರು ಸರಿ ಪ್ರಜೆಗಳ ಹಿತೃದೃಷ್ಟಿ ದೇಶದ ಅಭಿವೃದ್ಧಿಯನ್ನು ಬಯಸುತ್ತವೆ.

ಈಗ ಎಲ್ಲ ಕ್ಷೇಗಳಲ್ಲೂ ಸಮಾನವಾದ ಅವಕಾಶಗಳನ್ನು ಕೊಟ್ಟು ಪ್ರೋತ್ಸಾಹಿಸುತ್ತಿದೆ. ಈಗ ನಮ್ಮ ದೇಶ ಅಭಿವೃದ್ಧಿಯತ್ತ ಸಾಗುತ್ತಿದ್ದು ಮುಂದುವರಿದ ದೇಶಗಳೊಂದಿಗೆ ಪೈಪೋಟಿ ಮಾಡುತ್ತೀದ್ದು, ಎಲ್ಲ ಕ್ಷೇತ್ರಗಳಲ್ಲಿ ಸಾಧನೆಗೈಯುತ್ತಿರುವುದು ಹೆಮ್ಮೆಯ ವಿಷಯ. ಕ್ರಿಕೆಟ್, ಹಾಕಿ, ಕುಸ್ತಿ, ಜಾವಲಿಂಗ್, ಎರರೈಫೆಲ್, ಬ್ಯಾಡ್ಮಿಂಟನ್ ಇತ್ಯಾದಿ ಕ್ರೀಡೆಗಳಲ್ಲಿ ಮಾಡಿದ ಸಾಧನೆಗೆ ಇಡೀ ವಿಶ್ವವೆ ನಮ್ಮತ್ತ ನೋಡುತ್ತಿದ್ದೆ. ವಿನೇಶ್ ಪೊಗಟ್ olyampic ಫೈನಲ್ ಪಂದ್ಯದಲ್ಲಿ ಡಿಸ್ಕ್ವಾಲಿಫೈ ಆದಾಗ ಇಡೀ ದೇಶವೆ ಮರುಗಿತು,ಅದೆ ಕಂಚು ಗೆದ್ದಾಗ ಭಾರತದ ಮನೆ ಮನೆಗಳಲ್ಲಿ ಸಂಭ್ರಮ ಸಂಭ್ರಮ ಪಟ್ಟಿದ್ದರು, ಇದು ಏಕತೆಯ ಸೂಚಕ. "ಭಾರತ ದೇಶದಲ್ಲಿ ಹುಟ್ಟಿದ ನೀವು ಪುಣ್ಯವಂತರು" ಎಂದು ವಿವಿಧ ದೇಶದ ಜನರು ಹೇಳುತ್ತಾರೆ. ಭಾರತ ದೇಶ ಮಹಾನ್ ಹೈ, ಜೈ ಹಿಂದ್, ಜೈ ಭಾರತ್.

# ಬದುಕಿನ ಸಂತೆಯೊಳಗೆ ನಾನಾ ಮುಖಗಳ ಬೇಗೆ..

– ಪಲ್ಲವಿ ಚೆನ್ನಬಸಪ್ಪ

ಬದುಕಿನ ಸಂತೆಯೊಳಗೆ ಅನೇಕರು ಎದುರಾಗುತ್ತಾರೆ. ಸಮಾಜದ ಒಂದು ಭಾಗವಾದ ನಾವು ವಿಭಿನ್ನ ವ್ಯಕ್ತಿತ್ವ, ವಿವಿಧ ಅಭಿರುಚಿ, ವಿಚಿತ್ರ ಭಾವಗಳು.. ಹೀಗೆ ನಾನಾತರದ ವೈಚಿತ್ರ್ಯದಿಂದ ಕೂಡಿದ ಪರಿಸರದೊಳಗೆ ಇಷ್ಟವಿದ್ದೋ ಇಲ್ಲದೆಯೋ ಬದುಕಲೇಬೇಕಾಗುತ್ತದೆ. ಅನಿವಾರ್ಯತೆ ಮತ್ತು ಅವಶ್ಯಕತೆಗಳು ಕೆಲವೊಂದಕ್ಕೆ ಹೊಂದಿಕೊಳ್ಳಲೆ ಬೇಕಾದ ಸಂಧರ್ಭ ಸೃಷ್ಟಿಸುತ್ತವೆ. ಹೀಗೆ ಸಾಗುವ ಹಾದಿಯಲ್ಲಿ ಕೆಲವರು ಪರಿಚಿತರಾಗುತ್ತಾರೆ, ಕೆಲವು ಪರಿಚಿತರು ಅಪರಿಚಿತರಾಗಿ ಕಣ್ಮರೆಯಾಗುತ್ತಾರೆ. ಒಂದಷ್ಟು ಮನಗಳು, ಗುಣಗಳು ಹೃದಯಕ್ಕೆ ಬೇಗನೆ ಹತ್ತಿರವಾಗಿಬಿಡುತ್ತವೆ. ಮತ್ತೆ ಕೆಲವು ಹೊಸ್ತಿಲಲ್ಲೇ ಉಳಿದುಬಿಡುತ್ತವೆ. ಮತ್ತೊಂದಷ್ಟು ಸಂಬಂಧಗಳು ಪರಿವಾರವೆಂದೊ ಅಥವಾ ಮತ್ಯಾವುದೋ ಹೆಸರಿನಲ್ಲಿ ಕಾರಣ ನಿಮಿತ್ತ ಬದುಕಿನೊಳಗೆ ತೂರಿಕೊಂಡಿರುತ್ತವೆ.

"ಅಯ್ಯೋ ವಯಸ್ಸಾಯ್ತು ಇನ್ಯಾವಾಗ ಮದುವೆ ? ಜೀವನದಲ್ಲಿ ಏನು ಸಾಧಿಸಬೇಕೆಂದಿದ್ದಿ ಇನ್ನೂ ? ನೀನ್ಯಾಕೆ ಹೀಗೆ ಯಾರೊಂದಿಗೂ ಮಾತನಾಡದೆ ಮೂಲೆ ಹಿಡಿದು ಕೂರುತ್ತಿ..? ಮಕ್ಕಳಾಯ್ತಾ ? ನನ್ನ ಮಗ ಪರೀಕ್ಷೆ ಲಿ ಫಸ್ಟ್ ರ್‍ಯಾಂಕ್ ಬಂದಾಯ್ತು. ನಿಮ್ಮ ಮಗ ಪಾಸ್ ಆದ್ನ? " ಹೀಗೆ ಅರ್ಥವಿಲ್ಲದ ಪ್ರಶ್ನೆಗಳನ್ನು ಕೇಳಿ ನೆಮ್ಮದಿ ಕೆಡಿಸುವ ಮನಸ್ಥಿತಿಗಳು ಎದುರಾಗುತ್ತವೆ. ಕೆಲವೊಮ್ಮೆ ಎದುರಾಗುವ ಇಂತ ಪ್ರಶ್ನೆಗಳು ನಮ್ಮೊಳಗಿನ ಉತ್ಸಾಹ ಮತ್ತು ಆತ್ಮವಿಶ್ವಾಸ ಕುಂದಿಸುವ ಕೆಲಸ ಮಾಡುತ್ತವೆ. "ಹಾಗೆ ಇನ್ನೊಬ್ಬರ ಮಾತಿಗೆ ತಲೆ ಕೆಡಿಸಿಕೊಳ್ಳದೆ ನಮ್ಮ ಪಾಡಿಗೆ ನಾವು ಮುಂದೆ ಸಾಗೋಣ " ಎನ್ನುವ ಗಟ್ಟಿ ಮನಸ್ಥಿತಿ ಎಲ್ಲೋ ಕೆಲವರಿಗೆ ಮಾತ್ರ ಇರುತ್ತದೆ. ಇನ್ನ ಎಷ್ಟೋ ಜನ ಸಮಾಜದ ಬಿರುನುಡಿಗಳಿಗೆ ಸೋತು, ಏನೋ ಕಳೆದುಕೊಂಡವರಂತೆ ಜೀವನವನ್ನೇ ಅವಸಾನದ ಹಾದಿಗೆ ಇಳಿಸಿಕೊಂಡವರಿದ್ದಾರೆ. ಕೆಲವರಿಗೆ ತಮ್ಮ ತಟ್ಟೆಯಲ್ಲಿ ಹೆಗ್ಗಣ ಬಿದ್ದಿದ್ದರು ಕಂಡವರ ತಟ್ಟೆಯಲ್ಲಿ ನೊಣ ಹುಡುಕುವ ಚಾಳಿ. ಅಂತವರ ಮಾತನ್ನು ಅತಿಯಾಗೆ ಹಚ್ಚಿಕೊಂಡರೆ ನಾವು ಹುಚ್ಚಾಸ್ಪತ್ರೆಯಲ್ಲಿ ಬೆಡ್ ರಿಸರ್ವ್ ಮಾಡಿಕೊಳ್ಳಬೇಕಾಗುತ್ತದೆ ಎನ್ನುವುದನ್ನು ಅರಿಯಬೇಕಾದದ್ದು ಇಲ್ಲಿ ಅತೀ ಜರೂರಿನ ವಿಷಯ..!

ಎಲ್ಲರಿಗೂ ನಾವು ನಮ್ಮ ಮರುಉತ್ತರದ ಮೂಲಕವೇ ಅಥವಾ ನಮ್ಮನ್ನ ಸಮರ್ಥಿಸಿಕೊಂಡು ಎದುರಿನವರಿನ ಬಾಯಿ ಮುಚ್ಚಿಸುವ ಅವಶ್ಯಕತೆ ಇಲ್ಲ. ಅಂದುಆಡುವವರಿಗೆ ನಾವು ಪಾಸಿಟಿವ್ ಎನ್ನಿಸುವ ಅತ್ಯದ್ಭುತ ಜೀವನ ಶೈಲಿ ರೂಢಿಸಿಕೊಂಡು ಜೀವಿಸುವುದ ಕಲಿತರೆ ಸಾಕು. ಅದೇ ಎಲ್ಲರನ್ನು ಸುಮ್ಮನಾಗಿಸುತ್ತದೆ. ನಮ್ಮದೇ ವೈಯಕ್ತಿಕ ಸಮಸ್ಯೆ ಗೊಂದಲಗಳ ಜೊತೆ ಸೆಣೆಸುತ್ತ ಬದುಕಿನ ಗಮ್ಯದ ಹುಡುಕಾಟದ ಜೊತೆಗೆ ಒಂದಷ್ಟು ಮಾನಸಿಕ ನೆಮ್ಮದಿ ಸ್ಥಾಪಿಸಿಕೊಳ್ಳಲು ಹೋರಾಡುತ್ತಿರುತ್ತೇವೆ. ಆ ಹೋರಾಟದ



ನಡುವೆಯೂ ದಕ್ಕುವ ಸಣ್ಣ ಸಣ್ಣ ಖುಷಿಗಳನ್ನು ಆಸ್ವಾದಿಸುತ್ತ, ಸಿಹಿ ಕ್ಷಣಗಳನ್ನು ಹೃದಯದ ಜೋಳಿಗೆಗೆ ಪೇರಿಸಿಕೊಳ್ಳುವ, ಬೇಸರವೆನಿಸಿದಾಗ ಮೆಲುಕು ಹಾಕುತ್ತ ಮುಂದೆ ಮುಂದೆ ಸಾಗುವತ್ತಗಮನವಿಟ್ಟರೆಬದುಕುಖಂಡಿತಆಪ್ಯಾಯವಾಗುವುದರಲ್ಲಿ ಸಂದೇಹವಿಲ್ಲ.

ಮಲಗಿದೋದುಗನ ಕೈಹೊತ್ತಗೆಯು ನಿದ್ದೆಯಲಿ ? ಕಳಚಿ ಬೀಳ್ವುದು; ಪಕ್ವಫಲವಂತು ತರುವಿಂ ?? ಇಳೆಯ ಸಂಬಂಧಗಳು ಸಂಕಲ್ಪನಿಯಮಗಳು ? ಸಡಿಲವುವು ಬಾಳ್ ಮಾಗೆ ? ಮಂಕುತಿಮ್ಮ ?? ಎಂಬ ಕಗ್ಗದ ಮಾತಿನಂತೆ ಇಲ್ಲಿ ಎಲ್ಲರೂ ಅವರವರ ನಿಲ್ದಾಣ ಬಂದಾಗ ಇಳಿದು ಹೋಗುತ್ತಾರೆ. ಜೀವನದ ಹಾದಿಯಿದು ನಿರಂತರ ಅನುಭವಗಳ ಪ್ರವಾಹ. ಆ ಅನುಭವಗಳಿಂದ ಪಾಠ ಕಲಿತು ಪಕ್ವವಾಗುತ್ತ ಸಾಗಿದರೆ, ದೇಹದ ಜೊತೆ ಮನವೂ ಮಾಗಿದರೆ ಬದುಕಿನ ಪಾಕ ದೇವನಿಗೆ ನೈವೇದ್ಯವಾಗೊ ಘಮಿಸುವ ಸಿಹಿ ರಸಾಯನವಾಗುತ್ತದೆ ಅಲ್ಲವೇ..?

ಕವಿ ಮನಸು

## ಸರ್ವಜನಾಂಗದ ಶಾಂತಿಯ ತೋಟ



ಭಾರತ ಸರ್ವಜನಾಂಗದ ಶಾಂತಿಯ ತೋಟ
ಸರ್ವಧರ್ಮಗಳ ಸಮನ್ವಯದ ಸ್ನೇಹದ
ಕೂಟ;
ಜಾತಿ ಧರ್ಮಗಳು ಹಲವಿದ್ದರೂ
ಭಾವೈಕ್ಯತೆಯೊಂದೆ
ಭಾಷೆಗಳು ಬೇರೆಯಾದರು ನುಡಿವ
ನಾಲಿಗೆಯೊಂದೆ..!!

ಹಿಂದೂ ಮುಸ್ಲಿಂ ಕ್ರೈಸ್ತ ಬೌದ್ದರೆಲ್ಲರೂ
ಒಂದೇ
ರಾಮಾಯಣ ಮಹಾಭಾರತ ಕುರಾನ್
ಮಂತ್ರವೊಂದೆ;
ಹುತ್ತಿ ಬಿತ್ತುವ ಬೆಳೆಗೆ ಮಳೆಯ ಹನಿಯೊಂದೆ
ಹಗಲು ರಾತ್ರಿ ಬೆಳಕು ನೀಡೋ
ಸೂರ್ಯಚಂದ್ರರೊಂದೆ...!!

ಉಸಿರಾಡುವ ಗಾಳಿ ತಿನ್ನುವ ಅನ್ನವೊಂದೆ
ಮಡಿಮೈಲಿಗೆಯಾದರೆ ಸ್ವಚ್ಛಗೊಳಿಸೋ
ಗಂಗೆಯೊಂದೆ;
ಸ್ನೇಹ ಪ್ರೀತಿಯ ಬೆಸೆಯುವ ಮನದ
ಭಾವವೊಂದೆ
ಕಷ್ಟಕಾಲದಿ ಸಹಾಯಹಸ್ತ ಚಾಚುವ ಭಾರತ
ನಾಡೊಂದೆ...!!

ಸರ್ವ ಜನರಿಗೂ ನ್ಯಾಯ ನೀಡುವ
ಸಂವಿಧಾನವೊಂದೆ
ಭಾರತಾಂಬೆಗೆ ಕೀರಿಟಪ್ರಾಯ ತ್ರಿವರ್ಣ
ಧ್ವಜವೊಂದೆ;
ಸರ್ವಧರ್ಮಗಳು ಬೋಧಿಸುವ ನೀತಿಯ
ಪಾಠವೊಂದೆ
ಎಲ್ಲರ ಸಂಪ್ರದಾಯಗಳಿಗೂ ಬೆಲೆನೀಡುವ
ಪೂಣ್ಯಭೂಮಿಯೊಂದೆ....!!!

ಹಬ್ಬಗಳು ಬೇರೆಯಾದರು ಶುಭಕೋರುವ
ಮನಗಳೊಂದೆ
ಅತಿಥಿ ಸತ್ಕಾರದ ಸಂಸ್ಕೃತಿ ಜಗತ್ತಿಗೆಲ್ಲ
ಮಾದರಿಯೊಂದೆ;
ಸಾವುನೋವಿಗೆ ಮನಮೀಡಿವ ಹೃದಯಗಳ
ನೋವೊಂದೆ
ಸತ್ಯಧರ್ಮವ ಪರಿಪಾಲಿಸುವ ಮೌಲ್ಯದ
ಜನರೊಂದೆ....!!

ದೃಷ್ಟತನವ ಖಂಡಿಸುವ ದಿಟ್ಟತನದ
ಮನಗಳೊಂದೆ
ತಾಯ್ನೆಲದ ವಿರೋಧಿಗಳ ಹುಟ್ಟಡಗಿಸುವ
ಯೋಧರೊಂದೆ;
ಸಹಬಾಳ್ವೆಯ ಸಮನ್ವಯದ ಕ್ರಾಂತಿಮಾಡಿದ
ಬಸವಣ್ಣನ ನಾಡೊಂದೆ;
ಸರ್ವರಿಗೂ ಸಮಾನತೆ ಸ್ವಾತಂತ್ರ್ಯ ನೀಡಿದ
ಭಾರತ ನೆಲವೊಂದೆ..!!!!

– ಕಾಡಜ್ಜಿ ಮಂಜುನಾಥ ಹರಪನಹಳ್ಳಿ

## ಸ್ವಾತಂತ್ರ್ಯ

ಭಾರತೀಯರು ಸ್ವಾತಂತ್ರ್ಯದ ಪಣ ತೊಟ್ಟು
ಭೇದಭಾವವಿಲ್ಲದೆ ಸೇರಿದರೆಲ್ಲವೂ ಒಟ್ಟು।
ತೋರಿದರು ಹೋರಾಟದಲ್ಲಿ ತಮ್ಮ ಒಗ್ಗಟ್ಟು
ಇದುವೇ ದೇಶಪ್ರೇಮಿಗಳ ನಿಜವಾದ ಗುಟ್ಟು॥

ಬ್ರಿಟಿಷರಿಗೆ ಬಿತ್ತು ಉಗ್ರ ಹೋರಾಟದ ಪೆಟ್ಟು
ಭಾರತೀಯರಿಗೆ ಸ್ವಾತಂತ್ರ್ಯವನ್ನವರು ಕೊಟ್ಟು।
ಶರಣಾಗಿ ಹೊರಟರು ನಮ್ಮ ದೇಶವನ್ನು
ಬಿಟ್ಟು
ಭಾರತೀಯರ ಕೈಗೆ ಸಿಕ್ಕಿತು ಆಡಳಿತದ
ಜುಟ್ಟು॥

ಸ್ವಾತಂತ್ರ್ಯ ಪಡೆದುಕೊಂಡಿತು ಹೊಸ ಹುಟ್ಟು
ಸವಿದಂತಾಯಿತು ಭಾರತೀಯರಿಗೆ ಒಬ್ಬಟ್ಟು।
ಪ್ರಗತಿಯ ಚಿಂತನೆಯನ್ನು ಮನದೊಳಗಿಟ್ಟು
ಸಾಗಲಿ ದೇಶವು ಅಭಿವೃದ್ಧಿಯತ್ತ ಓಗೊಟ್ಟು॥

– ವಿಜಯಲಕ್ಷ್ಮಿ ನಾಯ್ಕ್
ಬಿಳಿಯೂರು ದಕ್ಷಿಣ ಕನ್ನಡ

# ಸ್ವಾತಂತ್ರ್ಯೋತ್ಸವದ ಹೊಸ್ತಿಲಿನಲ್ಲಿ... ಒಂದು ವಿಶ್ಲೇಷಣೆ



ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು" ಎಂಬುದು ಖ್ಯಾತ ಕವಿ ಸಿದ್ಧಲಿಂಗಯ್ಯನವರ ಕವನದ ಸಾಲು ಖಂಡಿತವಾಗಿಯೂ ವಾಸ್ತವವನ್ನು ಪ್ರತಿನಿಧಿಸುವ ಕವನ. ಸ್ವಾತಂತ್ರ್ಯ ಹೋರಾಟದ ಅಮೃತ ಮಹೋತ್ಸವ ಪೂರೈಸಿರುವ ನಮಗೆಲ್ಲಾ ಈ ಸ್ವಾತಂತ್ರ್ಯದ ಹಿಂದಿರುವ ಹೋರಾಟ, ತ್ಯಾಗ, ಬಲಿದಾನಗಳ ಅರಿವು ಖಂಡಿತ ಬೇಕು.

ಶತಮಾನಗಳ ಹಿಂದೆ ವ್ಯಾಪಾರದ ನೆವದಿಂದ ಭಾರತವನ್ನು ಹೊಕ್ಕು, ಭಾರತವನ್ನೇ ಆಳಿದ ಡಚ್ಚರು, ಪೋರ್ಚುಗೀಸರು, ಫ್ರೆಂಚರು ಮತ್ತು ಬ್ರಿಟಿಷರು ನಮ್ಮನ್ನು ಕೇವಲ ಆಳಲಿಲ್ಲ,ನಮ್ಮ ಸಂಸ್ಕೃತಿಯ ಆಳದಲ್ಲಿ ಬೇರುಬಿಟ್ಟ ಹಲವಾರು ಸಂಗತಿಗಳ ಮೇಲೆ ರಾಜ್ಯಭಾರ ಮಾಡಿದರು.'ವಸುದೈವ ಕುಟುಂಬಕಂ' ವ್ಯಾಖ್ಯಾನದ ಮೂಲಕ ಇಡೀ ಜಗತ್ತನ್ನು ಒಂದೇ ಕುಟುಂಬ ಎಂದು ಕರೆದ ಭಾರತ ದೇಶವನ್ನು ಒಡೆದು ಆಳಿದರು. ಹಲವಾರು ಜಾತಿ, ಮತ, ಧರ್ಮಗಳ ತವರೂರಾದ ಭಾರತ ದೇಶದ ಭಾವೈಕ್ಯತೆಯ ಮೂಲ ಬೇರನ್ನು ಅಲುಗಾಡಿಸಿದರು. ಆದರೆ ಭಾರತ ದೇಶ ಅಜೇಯ,ಅಗಮ್ಯ.ನೂರಾರು ಬಾರಿ ಮುರಿಯಲ್ಪಟ್ಟರೂ, ಹಲವಾರು ಬಾರಿ ತುಳಿಯಲ್ಪಟ್ಟರು ...ಮತ್ತೆ ಮತ್ತೆ ಮೇಲೇಳುತ್ತಾ ಬೂದಿಯಿಂದ ಹುಟ್ಟಿಬರುವ ಫೀನಿಕ್ಸ್ ಪಕ್ಷಿಯಂತೆ ತನ್ನ ಮೇಲೆ ಮಾಡಿದ ಎಲ್ಲ ಆಕ್ರಮಣಗಳಿಗೂ, ಪೈಶಾಚಿಕ ಅತ್ಯಾಚಾರಗಳಿಗೂ ತನ್ನದೇ ರೀತಿಯ ಹೋರಾಟದ ಹಾದಿಯ ಮೂಲಕ ಈ ಮಣ್ಣಿನ ಮಕ್ಕಳು ತಾಯಿ ಭಾರತಿಯ ಕೊರಳಿಗೆ ಜಯದ ಮಾಲೆಯನ್ನು ತೊಡಿಸಿದರು. ತಾವು ರಕ್ತದೋಕುಳಿಯಲ್ಲಿ ಮುಳುಗಿದರೂ ಭಾರತ ಮಾತೆಯ ಹಣೆಗೆ ವಿಜಯ ತಿಲಕವನಿಟ್ಟರು. ಹೋರಾಟದ ಹಾದಿಯಲ್ಲಿ ಎಣ್ಣೆಯಾಗಿ, ಬತ್ತಿಯಾಗಿ, ದೀಪವಾಗಿ ತನ್ನನ್ನೇ ತಾನು ಸುಟ್ಟುಕೊಂಡು ನಮಗೆ ಬೆಳಕನ್ನುಳಿಸಿ ಹೊರಟರು. ಸಹನೆ, ಶಾಂತಿ, ಸಹಬಾಳ್ವೆಯ ಮಂತ್ರಗಳನ್ನು ಜಪಿಸುತ್ತಾ ಶಾಂತವಾದ ಹೋರಾಟವನ್ನು ಕೆಲವರು ಮಾಡಿದರೆ,ಇನ್ನೂ ಹಲವರು ಕ್ರಾಂತಿಯ ಕಿಡಿ ಮೊಳಗಿಸಿದರು. ಆ ಸ್ವಾತಂತ್ರ್ಯ ಹೋರಾಟಗಾರರು ಪಟ್ಟ ಪರಿಶ್ರಮದ ಫಲವೇ ಇಂದಿನ ಸ್ವಾತಂತ್ರ್ಯಮಹೋತ್ಸವ. ಇದು ಎಂದೆಂದಿಗೂ ಮರೆಯಲಾಗದ ಅಮೃತ ಗಳಿಗೆ.

1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಸುಮಾರು ಮೂವತ್ತು ವರ್ಷಕ್ಕೆ ಮುಂಚೆಯೇ ಕಿತ್ತೂರು ರಾಣಿ ಚೆನ್ನಮ್ಮ ಬ್ರಿಟೀಷರ ವಿರುದ್ಧ ಸಿಡಿದೆದ್ದು ಯುದ್ಧ ಮಾಡಿದಳು.ಬೆಳವಡಿ ಮಲ್ಲಮ್ಮ,ಕೆಳದಿಯ ಚೆನ್ನಮ್ಮ, ಝಾನ್ಸಿಯ ರಾಣಿ ಲಕ್ಷ್ಮೀಬಾಯಿ ಹೀಗೆ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು ಕೂಡ ಭಾಗವಹಿಸಿ ಭಾರತಮಾತೆಯ ಸೇವೆಗೈದರು. ಅಹಿಂಸೆ,ಸತ್ಯಾಗ್ರಹದ ಶಾಂತ ಸ್ವರೂಪದ ಹೋರಾಟದ ಮೂಲಕ ಗಾಂಧೀಜಿಯವರು ಹೋರಾಡಿದರೆ, "ಸ್ವರಾಜ್ಯವೇ ನನ್ನ ಜನ್ಮಸಿದ್ಧ ಹಕ್ಕು ಅದನ್ನು ಪಡೆದೇ ತೀರುತ್ತೇನೆ" ಎಂದು ತಿಲಕರು ಘೋಷಿಸಿದರು. "ನನಗೆ ನಿಮ್ಮ ಒಂದು ಹನಿ ರಕ್ತ ಕೊಡಿ ನಾನು ನಿಮಗೆ ಸ್ವಾತಂತ್ರ್ಯವನ್ನು ತಂದು ಕೊಡುತ್ತೇನೆ" ಎಂದು ಸುಭಾಷ್ ಚಂದ್ರರು ಅಬ್ಬರಿಸಿದರು.ಹೀಗೆ ಸ್ವಾತಂತ್ರ್ಯ ಹೋರಾಟದ ಕಿಚ್ಚಿಗೆ ಹವಿಸ್ಸುಗಳಾದವರು ಹಲವರು. ಅವರ ಹಾದಿಗಳು ವಿಭಿನ್ನವಾದರೂ ಸೇರುವ ಗುರಿ ಒಂದೇ ಆಗಿತ್ತು. ಅದು ಭಾರತಮಾತೆಯ ಸ್ವಾತಂತ್ರ್ಯ. ತನ್ನ ಅಸಂಖ್ಯಾತ ಸ್ವಾತಂತ್ರ್ಯ ಹೋರಾಟಗಾರರ ನಿಸ್ವಾರ್ಥ ಹೋರಾಟ ಮತ್ತು ಬಲಿದಾನದ ಮೂಲಕ ಪಡೆದ ಮಹೋನ್ನತ ಸ್ವಾತಂತ್ರ್ಯಕ್ಕೆ ಇಂದು ಸಡಗರದ ಅಮೃತ ಮಹೋತ್ಸವ. ಲಕ್ಷಾಂತರ ಜನರ ಸ್ವಾಭಿಮಾನದ, ದೇಶಭಕ್ತಿಯ, ಮಾತೃಭೂಮಿ ಈ ಭಾರತ.ಭಾರತ ಎಂಬ ಹೆಸರೇ ಮೈಯಲ್ಲಿ ಪುಳಕವನ್ನುಂಟು ಮಾಡುವಂತಹ ಶಕ್ತಿಯನ್ನು ಹೊಂದಿದೆ. ಯಾಕೆಂದರೆ ನಾವು ನಮ್ಮ ದೇಶದೊಂದಿಗೆ,ದೇಶದ ನೆಲದೊಂದಿಗೆ ಭಾವನಾತ್ಮಕವಾದ ತಾಯಿ ನೆಲದ ನಂಟನ್ನು ಹೊಂದಿದ್ದೇವೆ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಸ್ವಾತಂತ್ರ್ಯ ದೊರೆತು ಎಪ್ಪತ್ತೇಳು ವರ್ಷಗಳು ಸಂದಿವೆ.ಸಾಕಷ್ಟು ಅಭಿವೃದ್ಧಿ ಕಾರ್ಯಗಳು ನಡೆದಿವೆ.ಶಿಕ್ಷಣ, ಆರೋಗ್ಯ, ಮೂಲ ಸೌಕರ್ಯಗಳಾದ ಆಹಾರ, ಬಟ್ಟೆ, ವಸತಿ ಎಲ್ಲದರಲ್ಲೂ ನಾವು ಸ್ಥಿರತೆಯನ್ನು ಸಾಧಿಸಿದ್ದೇವೆ. ಆರ್ಥಿಕವಾಗಿ ದೇಶ ಪ್ರಗತಿಯನ್ನು ಸಾಧಿಸಿದೆ . ಸಣ್ಣ ಗುಂಡುಸೂಜಿಯನ್ನು ಕೂಡ ತಯಾರಿಸಲು ಸಾಧ್ಯವಾಗದ ನಾವು ಇಂದು ಕ್ರಯೋಜನಿಕ್ ರಾಕೆಟ್ ಎಂಜಿನ್ ನನ್ನು ಮಂಗಳನ ಅಂಗಳಕ್ಕೆ ಮೊದಲ ಪ್ರಯತ್ನದಲ್ಲಿಯೇ ಕಳುಹಿಸಿದ್ದೇವೆ. ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ ಸಾಕಷ್ಟು ಉತ್ತಮ ಸ್ಥಿತಿಯಲ್ಲಿ ಇದ್ದು ಅಭಿವೃದ್ಧಿಶೀಲ ದೇಶಗಳ ಪಟ್ಟಿಯಲ್ಲಿ ನಾವೂ ಒಬ್ಬರಾಗಿದ್ದೇವೆ. ಜೊತೆಗೆ ಯುದ್ಧವನ್ನೇ ಮಾಡದೇ ಸ್ವಾತಂತ್ರ ಪಡೆದ ಜಗತ್ತಿನ ಏಕೈಕ ರಾಷ್ಟ್ರ ಎಂಬ ತುರಾಯಿ ನಮಗಿದೆ. ಸುತ್ತಲಿನ ಹಲವಾರು ರಾಷ್ಟ್ರಗಳ ಜತೆಗೆ ಒಳ್ಳೆಯ ರಾಜತಾಂತ್ರಿಕ ಸಂಬಂಧ, ಸ್ನೇಹ ಮತ್ತು ಬಾಂಧವ್ಯಗಳು ನಮಗಿದೆ. ಅಷ್ಟಲ್ಲದೆ ಜಗತ್ತಿನ ಅತ್ಯಂತ ಹೆಚ್ಚಿನ ಯುವ ಸಮೂಹ ಜನಸಂಖ್ಯೆ ನಮ್ಮಲ್ಲಿದೆ.ಅತಿ ಹೆಚ್ಚಿನ ಚಿನ್ನದ ಭಾಂಡಾರ ನಮ್ಮ ದೇಶದ ಮಹಿಳೆಯರಲ್ಲಿದೆ. ಅಂದು ಜ್ಞಾನವನ್ನು ಪಡೆಯಲು ನಮ್ಮಲ್ಲಿಗೆ ಬರುತ್ತಿದ್ದ ಸಾವಿರಾರು ಜನರಿಗೆ ಜ್ಞಾನ ದಾಸೋಹ ನೀಡುತ್ತಿದ್ದ ಭಾರತ ಇ0ದು ಜಗತ್ತಿಗೆ ಅತಿ ಹೆಚ್ಚಿನ ವೈದ್ಯರನ್ನು ಎಂಜಿನಿಯರ್ಗಳನ್ನು,ವಿಜ್ಞಾನಿಗಳನ್ನು ತಂತ್ರಜ್ಞರನ್ನು ರಫ್ತು ಮಾಡುತ್ತಿದೆ. ಕಾರ್ಯಕುಶಲತೆ, ದೂರದೃಷ್ಟಿ,ಸಮಯೋಚಿತ ನಿರ್ಧಾರಗಳಿಗೆ ಭಾರತ ಹೆಸರಾದ ದೇಶ.

ಭಾರತ ದೇಶ ಇಡೀ ಜಗತ್ತಿಗೆ ಯೋಗದ, ಧ್ಯಾನದ ಜ್ಞಾನವನ್ನು ಕೊಟ್ಟಿದೆ. ಇಡೀ ಜಗತ್ತು ನಾಗರಿಕತೆಯ ತೊಟ್ಟಿಲಲ್ಲಿ ತೂಗುತ್ತಿರುವಾಗಲೇ ನಮ್ಮ ದೇಶ ವೇದ, ಉಪನಿಷತ್ತು,ಪುರಾಣಗಳ ಮೂಲಕ ವಿಶ್ವಗುರು ಸ್ಥಾನವನ್ನು ಪಡೆದಿತ್ತು. ಹಲವು ಶತಮಾನಗಳ ಹಿಂದಿನ ಕಾಲದಲ್ಲಿಯೇ ಭಾರತದ ವಿಶ್ವವಿದ್ಯಾಲಯಗಳಾದ ನಳಂದ, ತಕ್ಷಶಿಲಾ, ಪಾಟಲಿಪುತ್ರ ಮತ್ತು ಕಂಚಿ ವಿದ್ಯಾಪೀಠಗಳು ಹೆಸರುವಾಸಿಯಾಗಿದ್ದವು.ಉನ್ನತ ಜ್ಞಾನದ ಕೇಂದ್ರಗಳಾಗಿದ್ದವು. ಜಗತ್ತಿನ ವಿವಿಧ ದೇಶಗಳ ಜನರು ಜ್ಞಾನಾರ್ಜನೆಗಾಗಿಯೇ ಭಾರತಕ್ಕೆ ಪ್ರವಾಸಿಗರಾಗಿ ಬರುತ್ತಿದ್ದರು.ಹಾಗೆ ಬಂದ ಹಲವಾರು ಜನರು ಭಾರತದ ಸಂಸ್ಕೃತಿಗೆ ಮಾರುಹೋಗಿ ಇಲ್ಲಿಯೇ ನೆಲೆಸಿದರು ಪರಿಣಾಮ ಭಾರತ ಸರ್ವ ಜನಾಂಗದ ನೆಲೆವೀಡಾಯಿತು. ಜಗತ್ತಿನಲ್ಲಿಯೇ ಬಹುಶಃ ಭಾರತದಲ್ಲಿರುವಷ್ಟು ಮತಗಳು,ಧರ್ಮಗಳು, ಜಾತಿಗಳು ಮತ್ತು ಉಪಜಾತಿಗಳು, ಭಾಷೆಗಳು ಜಗತ್ತಿನ ಬೇರಾವುದೇ ದೇಶಕ್ಕೆ ಇಲ್ಲ. ಜತೆಗೆ ಭಾರತದಲ್ಲಿ ಹೆಜ್ಜೆ ಹೆಜ್ಜೆಗೂ ಒಂದೊಂದು ದೇವಸ್ಥಾನಗಳು,ಮಸೀದಿಗಳು ಮಂದಿರಗಳು ಇದ್ದರೂ ಕೂಡ ಅವು ನಮ್ಮನ್ನು ವಿವಿಧತೆಯಲ್ಲಿ ಏಕತೆ ಎಂಬಂತೆ ಭಾವೈಕ್ಯವನ್ನು ಸಾಧಿಸಿದ್ದೇವೆ. ಸಣ್ಣಪುಟ್ಟ ಕೋಮುಗಲಭೆಗಳು, ಮತಾಂತರಗಳು ಇದ್ದರೂ ಕೂಡ ಅವು ವೈಪರೀತ್ಯಕ್ಕೆಳಸದಂತೆ ನಮ್ಮ ದೇಶದ ಸಂವಿಧಾನದ 3ಮುಖ್ಯ ಅಂಗಗಳಾದ ಶಾಸಕಾಂಗ , ಕಾರ್ಯಾಂಗ ಮತ್ತು ನ್ಯಾಯಾಂಗಗಳು ಕಾರ್ಯನಿರ್ವಹಿಸುತ್ತಿವೆ.

ಜಗತ್ತಿನ ಅತ್ಯುನ್ನತ ಮಿಲಿಟರಿ ಕಾರ್ಯಪಡೆ ನಮ್ಮಲ್ಲಿದೆ .ಅತ್ಯಾಧುನಿಕ ಯುದ್ಧ ವಿಮಾನಗಳು, ತಾಂತ್ರಿಕ ಕುಶಲತೆ ಮತ್ತು ಶಸ್ತ್ರಾಸ್ತ್ರಗಳನ್ನು ನಮ್ಮ ಮಿಲಿಟರಿ ಪಡೆ ಹೊಂದಿದೆ.ದೇಶಪ್ರೇಮಿಗಳಲ್ಲ ...ದೇಶಭಕ್ತ ಮಿಲಿಟರಿ ಯೋಧರು ನಮ್ಮಲ್ಲಿದ್ದಾರೆ. ಮೈನಸ ಹತ್ತು ಡಿಗ್ರಿ ಸೆಂಟಿಗ್ರೇಡ್ ಉಷ್ಣತೆಯಲ್ಲಿಯೂ ಕೂಡ ಭಾರತ ದೇಶದ ಹಿಮಾಲಯ ಪರ್ವತ ಪ್ರದೇಶದ ಸುತ್ತಲೂ ,ಪಾಕಿಸ್ತಾನದ ಗಡಿ ಭಾಗವನ್ನು , ಸಿಯಾಚಿನ್ ಗಡಿಭಾಗವನ್ನು, ಚೀನಾ ಮತ್ತು ಬಾಂಗ್ಲಾ ದೇಶದ ಗಡಿಗಳನ್ನು ಪಶ್ಚಿಮ ಕರಾವಳಿ ತೀರಗಳನ್ನು,ಪಂಜಾಬ್ ನ ಕಚ್ ನ ರಣ ಭೂಮಿಗಳನ್ನು ಕಣ್ಣಲ್ಲಿ ಕಣ್ಣಿಟ್ಟು ಕಾವಲು ಕಾಯುವ ಭೂಸೇನೆ, ನೌಕಾಸೇನೆ, ವಾಯುಸೇನೆಗಳು ನಮ್ಮಲ್ಲಿವೆ.ಗಡಿ ಭದ್ರತಾ ಪಡೆ ಅಲ್ಲದೆ ಅರೆ ಸೇನೆ ,ಗೃಹರಕ್ಷಕ ದಳ ಮತ್ತು ಆರಕ್ಷಕ ಪಡೆಗಳ ದೊಡ್ಡ ಸೈನ್ಯವೇ ದೇಶದ ಒಳಭಾಗವನ್ನು ಕಾಯುತ್ತದೆ. ಕ್ಷಿಪ್ರ ಕಾರ್ಯಾಚರಣೆಯ ಪ್ಯಾರಾ ಮಿಲಿಟರಿ ಮತ್ತು ಕಮಾಂಡೋ ಪಡೆಗಳು ಕೂಡ ನಮ್ಮಲ್ಲಿವೆ.

ಹೆಜ್ಜೆ ಹೆಜ್ಜೆಗೂ ನದಿಗಳು,ಸಮುದ್ರಗಳು ತೀರ್ಥಕ್ಷೇತ್ರಗಳು ಇವೆ . ಆಧ್ಯಾತ್ಮ ಹೃದಯದ ಭಾರತ ದೇಶದಲ್ಲಿ ಧಾರ್ಮಿಕ ಭಾರತದಲ್ಲಿಯೂ ಕೂಡ ಮಾನವೀಯತೆ ತನ್ನ ಕೈ ಮೇಲಾಗಿಸಿದೆ.ವೈದ್ಯಕೀಯ ಕ್ಷೇತ್ರದಲ್ಲಿಯೂ ಕೂಡ ನಮ್ಮ ದೇಶ ಬದಲಿ ಹೃದಯ ಕಸಿ ಚಿಕಿತ್ಸೆ,ಸತ್ತ ವ್ಯಕ್ತಿಗಳ ಅಂಗಾಂಗಗಳನ್ನು ಜೀವಂತ ವ್ಯಕ್ತಿಗಳಿಗೆ ಅಳವಡಿಸುವಿಕೆಯ0ತಹ ಅತ್ಯಂತ ಉನ್ನತ ತಂತ್ರಜ್ಞಾನದ ಪ್ರಗತಿ ಸಾಧಿಸಿದೆ.

ಒಟ್ಟಿನಲ್ಲಿ ಒಂದು ದೇಶಕ್ಕೆ ಬೇಕಾಗುವ ಸಮಗ್ರವೂ ನಮ್ಮಲ್ಲಿ ತುಸು ಹೆಚ್ಚೇ ಇದೆ. ದೇಶ ಕ್ಷೋಭೆಯಲ್ಲಿದ್ದಾಗ ಹೋರಾಟದ ಮೂಲಕ ಶಾಂತ ಸ್ಥಿತಿಯಲ್ಲಿರುವಾಗ ವೈಜ್ಞಾನಿಕ, ಶೈಕ್ಷಣಿಕ, ಆರ್ಥಿಕ, ವ್ಯಾವಹಾರಿಕ, ಪಾರಮಾರ್ಥಿಕ ಪ್ರಗತಿಯ ಮೂಲಕ ಭಾರತ ಮೇಲುಗೈ ಸಾಧಿಸುತ್ತಿದೆ. ಎಲ್ಲವೂ ಸರಿಯೇ ?? ಆದರೆ ನಿಜವಾದ ಸ್ವಾತಂತ್ರ್ಯದ ಅರ್ಥ ನಮಗೆ ತಿಳಿದಿದೆಯೇ ?? ಅರಿತಿದ್ದು ಮರೆತಿರುವ, ಮರೆತಂತೆ ಮೈಮರೆವ ವಿಷಯವಿದು. ಇದನ್ನು ವಿಸ್ಮೃತಿ ಎಂದು ಕರೆಯಬಹುದು, ಉಪೇಕ್ಷೆ ಎಂದು ಕೂಡ ಹೇಳಬಹುದು.

A spark neglected, burns the house ಎಂಬ ಮಾತಿನಂತೆ ನಾವು ಪ್ರಸ್ತುತವಾಗಿ ನಡೆದುಕೊಳ್ಳುತ್ತಿದ್ದೇವೆ.ಸಣ್ಣದೊಂದು ಬೆಂಕಿಯ ಕಿಡಿ ಇಡೀ ಮನೆಯನ್ನೇ ಸುಟ್ಟು ಬೂದಿ ಮಾಡಿತಂತೆ!! ಹಾಗಾಗಬಾರದಲ್ಲವೇ ?? ನಮ್ಮ ದೇಶದ ಈಶಾನ್ಯ ಭಾಗದಲ್ಲಿರುವ ಸಪ್ತ ರಾಜ್ಯಗಳಲ್ಲಿ ಅಸ್ಸಾಂ, ಸಿಕ್ಕಿಂ, ಮೇಘಾಲಯ, ನಾಗಾಲ್ಯಾಂಡ್ ಮುಂತಾದ ರಾಜ್ಯಗಳು ಗಡಿ ಭೀತಿಯನ್ನು ಎದುರಿಸುತ್ತಿವೆ .ಪಂಜಾಬ್ ಕೂಡ ಇದಕ್ಕೆ ಹೊರತಲ್ಲ.ಕರ್ನಾಟಕ ತಮಿಳ್ನಾಡುಗಳೂ ನೀರಿಗಾಗಿ ಹೊಡೆದಾಡುತ್ತಿವೆ. ಕರ್ನಾಟಕ ಮಹಾರಾಷ್ಟ್ರ ಗಡಿ ಭಾಗಕ್ಕಾಗಿ ಹೊಡೆದಾಡುತ್ತಿವೆ. ಹಲವಾರು ಪಕ್ಷಗಳು ರಾಜಕೀಯ ಕಾರಣಕ್ಕಾಗಿ ಹೊಡೆದಾಡುತ್ತವೆ. ವಿಷಮತೆಯ ಭೀತಿ ಅವರಿಂದಲೂ ಇದೆ.

ಸಾಮಾಜಿಕ ಅಸಮಾನತೆ, ಅಜ್ಞಾನ,ಬಡತನ, ಅಂಧಶ್ರದ್ಧೆ,ಅಂಧಾನುಕರಣೆ, ವ್ಯವಸ್ಥೆಯ ಕುರಿತಾದ ಹಗುರ ಭಾವನೆ ಇವು ಕೇವಲ ಒಂದೆರಡು ಉದಾಹರಣೆಗಳಷ್ಟೆ.ಈ ರೀತಿಯ ಸಣ್ಣ ಪುಟ್ಟ ಕಲಹಗಳು ಮುಂದೆ ದೊಡ್ಡದಾಗಿ ರಾಷ್ಟ್ರವ್ಯಾಪಿ ತೊಂದರೆಗಳಾಗಿ ಪರಿಣಮಿಸುವುದುಂಟು. ಈ ರೀತಿಯ ಕಲಹಗಳಿಂದ ದೇಶದ ಆತ್ಮ ದುರ್ಬಲವಾಗುತ್ತದೆ .ನಮ್ಮ ಶಕ್ತಿ ಕುಂಠಿತವಾಗುತ್ತದೆ ಎಂಬುದನ್ನು ನಾವು ಅರಿಯಬೇಕು.ಭಾಷೆಗಾಗಿ, ನೀರಿಗಾಗಿ, ಭೂಮಿಗಾಗಿ ಜಾತಿ–ಧರ್ಮಗಳ ಶ್ರೇಷ್ಠತೆಯ ಪ್ರತಿಪಾದನೆಗಾಗಿ ನಮ್ಮ ಹೋರಾಟಗಳು ನಮ್ಮನ್ನು ವಿನಾಕಾರಣದ ಶಂಕೆ ಅನುಮಾನಗಳಿಗೆ ಈಡು ಮಾಡುತ್ತದೆ.ಈ ಅನುಮಾನ ಎನ್ನುವುದು ಬೇರೇ ಇಲ್ಲದ ಹಾವಸೆಯಂತೆ(ಪಾಚಿಯಂತೆ), ಕೆಳಗಿನ ಪಾರದರ್ಶಕತೆಯು ಕಾಣದಂತೆ ಮುಸುಕಿದ ಹಾಗೆ ಹರಡಿಕೊಳ್ಳುತ್ತದೆ.ಪರಿಣಾಮ ನಾವು ನಮ್ಮತನವನ್ನು ಕಳೆದುಕೊಂಡು ಸಣ್ಣಪುಟ್ಟ ಕಾರಣಗಳಿಗಾಗಿ ಜಗಳ ದೊಂಬಿ ಗಲಾಟೆ ಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳುತ್ತೇವೆ ತತ್ಪರಿಣಾಮವಾಗಿ ನಮ್ಮನ್ನು ನಾವೇ ಸಂಕುಚಿತ ಗೊಳಿಸಿ ಕೊಳ್ಳುತ್ತೇವೆ. ಇದು ಸಲ್ಲದು.ಇಡೀ ಜಗತ್ತಿಗೆ ಶಾಂತಿಯ, ಸೌಹಾರ್ದತೆಯ, ಸಾರ್ವಭೌಮತ್ವದ ಏಕತೆಯ ಪಾಠ ಹೇಳಿಕೊಟ್ಟ ಭರತ ಭೂಮಿ ನಮ್ಮದು.ಅದರ ಹಿರಿಮೆ ಗರಿಮೆಯನ್ನು ಉಳಿಸಿಕೊಳ್ಳುವ ಜವಾಬ್ದಾರಿಯೂ ಕೂಡ ನಮ್ಮದೇ.

ಯುವಕರ ಗುಂಪನ್ನು ಸ್ವಾತಂತ್ರ್ಯದ ಕುರಿತು ಪ್ರಶ್ನಿಸಿ ನೋಡಿ,ಬಹಳಷ್ಟು ಜನ ತಮಗೇನೂ ಗೊತ್ತಿಲ್ಲವೆಂದೇ ಹೇಳುವರು.ಕಾರಣವಿಷ್ಟೆ ಆಧುನಿಕತೆಗೆ ಮಾರುಹೋಗಿ ಪಾಶ್ಚಿಮಾತ್ಯರ ಅಂಧಾನುಕರಣೆ ಮಾಡುತ್ತಿರುವ ನಮ್ಮ ದೇಶದ ಜನರು ಒಂದು ರೀತಿಯ ವಿಸ್ಮೃತಿಯಲ್ಲಿದ್ದಾರೆ.ಅವರ ವೇಷ ಭೂಷಣಗಳನ್ನು ಅವರ ಭಾಷೆಗಳನ್ನು ತಮ್ಮದಾಗಿಸಿಕೊಳ್ಳುವ ಮೂಲಕ ನಮ್ಮದಲ್ಲದ ಸಂಸ್ಕೃತಿಯ ದಾಸರಾಗುತ್ತಿದ್ದಾರೆ.ಇದನ್ನು ತಪ್ಪಿಸಲು ಸಾಧ್ಯವೇ ??ಖಂಡಿತ ಸಾಧ್ಯವಿದೆ.ಭಾರತ ದೇಶದ ಜನತೆ ಯಾವತ್ತೂ ಜಗತ್ತಿನ ಎಲ್ಲಾ ಒಳ್ಳೆಯದನ್ನು ಸ್ವಾಗತಿಸಿದ್ದಾರೆ ಹಾಗೆಯೇ ಸ್ವಾಗತಿಸೋಣ ಕೂಡ. ಆದರೆ ಪರಕೀಯರನ್ನು ಸ್ವಾಗತಿಸುವ ಭರದಲ್ಲಿ ,ಅವರ ಸಂಸ್ಕೃತಿಯನ್ನು ಗೌರವಿಸುವ ಭರದಲ್ಲಿ ನಮ್ಮ ಮನೆಯನ್ನು, ನಮ್ಮ ಮಾತೆಯರನ್ನು,ನಮ್ಮ ಸಂಸ್ಕೃತಿಯನ್ನು ತಿರಸ್ಕರಿಸುವುದು ಎಷ್ಟರಮಟ್ಟಿಗೆ ಸರಿ ?ಹರಕು ಸೀರೆ ಉಟ್ಟರೂ ಹೆತ್ತ ತಾಯಿ ಹೆತ್ತ ತಾಯಿಯೇ !! ಆಕೆಯ ಹರಕು ಸೆರಗಿನಲ್ಲಿಯೇ ಮಾತೃತ್ವದ ಗಂಧವಿದೆ, ಮಮತೆಯ ಭಂಡಾರವಿದೆ, ಪ್ರೀತಿಯಿದೆ, ವಿಶ್ವಾಸವಿದೆ,ದೇಶಭಕ್ತಿಯ, ಜ್ಞಾನದ ಅಮೂಲ್ಯ ಗಣಿ ಇದೆ

ಸ್ಯಾಮ್ಯುಯೆಲ್ ಜಾನ್ಸನ್ ಹೇಳಿದ ಮಾತೊಂದಿದೆ ದೇಶಭಕ್ತಿ ಎಂಬುದು 'ಪುಂಡರ ಕೊನೆಯ ಆಶ್ರಯ ತಾಣ'ಇದು ಎಲ್ಲವನ್ನೂ ಹೇಳುತ್ತದೆ ದೇಶ ಎಂದರೆ ಏನು ?ಅದೇನು ನಮ್ಮ ತ್ರಿವರ್ಣ ಧ್ವಜವೇ? ಭಾರತಮಾತೆಯ ಚಿತ್ರವೇ? ಯಾರೂ ದೇಶ ಅಥವಾ ರಾಷ್ಟ್ರ ಎನ್ನುವ ಅಮೂರ್ತ ಪರಿಕಲ್ಪನೆಯನ್ನು ಪ್ರೀತಿಸುವುದಿಲ್ಲ ವ್ಯಕ್ತಿಗಳನ್ನು ಪ್ರೀತಿಸುತ್ತಾರೆ ದೇಶಭಕ್ತಿ ಎಂಬುದು ರಾಷ್ಟ್ರೀಯತೆಯ ಪರಿಕಲ್ಪನೆ.ರಾಷ್ಟ್ರೀಯತೆ ಎಂಬ ಪರಿಕಲ್ಪನೆಯು ಇತಿಹಾಸದ ಉದ್ದಕ್ಕೂ ಹಲವು ನಾಶ ನಷ್ಟಗಳಿಗೆ ಕಾರಣವಾಗಿದೆ.ಮತ್ತೊಬ್ಬರನ್ನು ವಿ ನಾಶಪಡಿಸುವುದೇ ದ್ವೇಷಿಸುವುದರ ಮೂಲಕವೇ ನಮ್ಮ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಕಟ್ಟಿಕೊಳ್ಳಬಾರದು ಹೀಗೆ ಮಾಡಿದ್ದರಿಂದಲೇ ಹಿಟ್ಲರ್ ಯಹೂದಿಗಳನ್ನು ದ್ವೇಷಿಸಿದ.ದ್ವೇಷಕ್ಕೆ ದ್ವೇಷವೇ ಉತ್ತರವಲ್ಲ? ಹಾಗೆಯೇ ಪ್ರೇಮವು ಉತ್ತರವಲ್ಲ ಎರಡರ ಮಧ್ಯದ ಹಾದಿಯನ್ನು ಆರಿಸಿಕೊಳ್ಳುವುದು ಬಹುಶಃ ಸರಿಯಾಗಬಹುದು. "ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ" ಎಂಬ ವ್ಯಾಖ್ಯಾನದಂತೆ ನಾವು ನಡೆದುಕೊಳ್ಳಬೇಕು.

ಎಷ್ಟೆಲ್ಲಾ ದೋಷಗಳನ್ನು ಹೊಂದಿದ್ದರೂ ತಾಯಿ ತನ್ನ ಮಗುವನ್ನು ಪ್ರೀತಿಸುವುದಿಲ್ಲವೇ ? ಹಾಗೆಯೇ ಹಲವಾರು ದೋಷಗಳನ್ನು ಹೊಂದಿದ್ದರೂ ಕೂಡ ಅಖಂಡ ಭಾರತ ನಮ್ಮ ಹೆಮ್ಮೆಯ, ಪ್ರೀತಿಯ ಅಭಿಮಾನದ ಜನ್ಮಭೂಮಿ.ಇದರ ಅರಿವಿನ ಜೊತೆಗೆ ನಮ್ಮತನವನ್ನು ಬಿಟ್ಟುಕೊಡದೆ ಸಾತ್ವಿಕ ಪ್ರಜ್ಞೆಯನ್ನು ಹೆಚ್ಚಿಸಿಕೊಳ್ಳುತ್ತಾ ನಮ್ಮ ದೇಶದ ಸಂಸ್ಕೃತಿ ಸಂಪ್ರದಾಯ ಸಾರ್ವಭೌಮತ್ವದ ಅರಿವನ್ನು ಹೆಚ್ಚಿಸಿಕೊಳ್ಳೋಣ. ನಮ್ಮ ಪೂರ್ವಜರು ನಮಗೆ ರಕ್ತ ಹರಿಸಿ ತಂದುಕೊಟ್ಟ ಸ್ವಾತಂತ್ರ್ಯಕ್ಕೆ ನಮ್ಮ ಜಾಣ್ಮೆಯನ್ನು ಬೆರೆಸಿ, ನಿಜವಾದ ಸ್ವಾತಂತ್ರ್ಯದ ಮೌಲ್ಯವನ್ನು ಪಡೆಯೋಣ, ಎಂಬ ಆಶಯದೊಂದಿಗೆ

• Admissions
• Requirements
• Firm Branding
• Public Notice
• Change of Name

BOOK NOW!

Booking Open for Your Advertisements in Leading Local, State & National News Papers
9482599089 / 9448633038

• Obituary
• Remembrance
• Birthday wish ads
• Events Display &
• Classified ads

SHUBHA Ads C/o HAMPI TIMES, Bamboo Bazaar, Nr Valmiki Circle, Hosapete-583201 Vijayanagara Dist.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಶ್ರಾವಣ । ಸಂವತ್ಸರ: ಕ್ರೋಧಿ

**15–08–2024 – ಗುರುವಾರ**

| | |
|---|---|
| ತಿಥಿ | : ದಶಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಜ್ಯೇಷ್ಠ |
| ಯೋಗ | : ವೈಧೃತಿ |
| ಕರಣ | : ಗರಜ |
| ಸೂರ್ಯೋದಯ | : 06:04:26 |
| ಸೂರ್ಯಾಸ್ತ | : 18:57:54 |
| ರಾಹು ಕಾಲ | : 14:08–15:45 |
| ಯಮಘಂಡ ಕಾಲ | : 06:04–07:41 |
| ಗುಳಿಕ ಕಾಲ | : 09:18–10:54 |

## ತುಂಗಭದ್ರಾ ನೀರಿನ ಮಟ್ಟ



ಬುಧವಾರ : 14–08–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1627.17 ಅಡಿ |
| ಒಳ ಹರಿವು | 32924 ಕ್ಯುಸೆಕ್ |
| ಹೊರ ಹರಿವು | 120097 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 83.742 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1628.65 ಅಡಿ |
| ಒಳ ಹರಿವು | 8651 ಕ್ಯುಸೆಕ್ |
| ಹೊರ ಹರಿವು | 10302 ಕ್ಯುಸೆಕ್ |
| ಸಾಮರ್ಥ್ಯ | 89.081 ಟಿಎಂಸಿ |

# ಮನಸ್ಸಿನ ನೆಮ್ಮದಿ ಆರೋಗ್ಯಕ್ಕೆ ಔಷಧಿ ಸಂಗೀತ

## ಪಂಚಮಸಾಲಿ ಯುವ ಘಟಕ ತಾಲೂಕು ಅಧ್ಯಕ್ಷ ಶಿವಕುಮಾರ್ ಗೌಡ ಹೇಳಿಕೆ

■ ಹಂಪಿ ಟೈಮ್ಸ್ ಕೊಟ್ಟೂರು

ಮನಸ್ಸಿಗೆ ನೆಮ್ಮದಿ ಮತ್ತು ಉತ್ತಮ ಆರೋಗ್ಯ ಕಾಯ್ದುಕೊಳ್ಳಲು ಸುಗಮ ಸಂಗೀತ ಔಷಧಿಯೋಪಾದಿಯಲ್ಲಿ ಕಾರ್ಯನಿರ್ವಹಿಸುತ್ತೆ ಹಾಗಾಗಿ ಸುಗಮ ಸಂಗೀತವನ್ನು ಆಗಾಗ ಆಲಿಸತ್ತಿರಭೇಕು ಎಂದು ಪಂಚಮಸಾಲಿ ಯುವ ಘಟಕ ತಾಲೂಕು ಅಧ್ಯಕ್ಷ ಶಿವಕುಮಾರ್ ಗೌಡ ಹೇಳಿದರು.

ಪಟ್ಟಣದ ಕೋಟೆ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಮಂಗಳವಾರ ಕನ್ನಡ ಮತ್ತು ಸಂಸ್ಕೃತ ಇಲಾಖೆ,ಹೊಸಪೇಟೆ ಹಾಗೂ ಶ್ರೀ ಆದಿಶಕ್ತಿ ಸಂಗೀತ ಸಾಂಸ್ಕೃತಿಕ ಕಲಾ ಸೇವಾ ಟ್ರಸ್ಟ್ ಅಲಬೂರು ಇವರ ಸಹಯೋಗದಲ್ಲಿ ಕೋಗಳಿ ಕಮ್ಮಾರ ಕೋಟೆಪ್ಪ ತಂದೆ ಕೆ.ಪೂರ್ವಚಾರಿ ನಡೆಸಿ ಕೊಟ್ಟ ಸುಗಮ ಸಂಗೀತ ಕಾರ್ಯಕ್ರಮದಲ್ಲಿ ಮಾತನಾಡಿದರು.




ಎಲ್.ಸುದರ್ಶನ, ಎಲ್ .ವೃಷಬೇಂದ್ರ ಗೌಡ ತಬಲವಾದಕರಾಗಿ,ಬಿ.ಜಕಣಾಚಾರಿ ಚಿಗ ಟೇರಿ ಡೋಲಕ್ ವಾದಕರಾಗಿ ಕಾರ್ಯ ನಿರ್ವಹಿಸಿದರು. ಆರ್.ಎಂ ಕೊಟ್ರಯ್ಯ ದೀಪ ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಕೆ.ಸುಜಾತ ಅಧ್ಯಕ್ಷರು ಶ್ರೀ ಆ.ಸಂ.ಸಾ.ಕ.ಸೇ.ಟ್ರಸ್ಟ್ , ಟ್ರಸ್ಟ್ ನ ಗೌರವ ಅಧ್ಯಕ್ಷರು ಕೆ.ಎಂ ಅಜ್ಜಯ್ಯ, ಸುಮಾ ಮಂಜುನಾಥ ಗೌಡ ಮಾಜಿ ಪಪಂ ಸದಸ್ಯರು ಕೊಟ್ಟೂರು, ಕೋಡಳ್ಳಿ ನಾಗರಾಜ್, ಬಣಕಾರ ಬಸವರಾಜ್ ಸೇರಿದಂತೆ ಅನೇಕ ಕಲಾವಿದರು ಪ್ರೇಕ್ಷಕರು ಹಾಜರಿದ್ದರು.

# ಅಹವಾಲುಗಳಿಗೆ ತಕ್ಷಣವೇ ಸ್ಪಂದಿಸಿ



ಮೊದಲ ಪುಟದಿಂದ

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಹರಿಬಾಬು ಬಿ.ಎಲ್. ಸೇರಿದಂತೆ ಹಲವು ಗಣ್ಯರು, ಜನಪ್ರತಿನಿಧಿಗಳು, ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಹಾಗೂ ಮತ್ತಿತರರಿದ್ದರು.

ಕರ್ತವ್ಯ ವೇಳೆ ಹೃದಯಾಘಾತದಿಂದ ಮೃತಪಟ್ಟ ಹೊಸಪೇಟೆ ಯುನಿಟ್‌ನ ಗೃಹ ರಕ್ಷಕದಳ ಸಿಬ್ಬಂದಿ ಬಿ.ಗೌಸ್ ಅವರ ಕುಟುಬಸ್ಥರಿಗೆ ಸಚಿವರು 1 ಲಕ್ಷ ರೂ.ಗಳನ್ನು ವೈಯಕ್ತಿಕವಾಗಿ ಧನಸಹಾಯ ನೀಡಿದರು.

ವಿವಿಧ ಇಲಾಖೆಯ ಕೌಂಟರ್ ಸ್ಥಾಪನೆ: ಸಾರ್ವಜನಿಕರಿಂದ ಅಹವಾಲು ಸಲ್ಲಿಕೆಗೆ ಜಿಲ್ಲಾಡಳಿತದಿಂದ ವಿವಿಧ ಇಲಾಖೆಗಳ ಕೌಂಟರ್ ಸ್ಥಾಪಿಸಿ, ಇಲಾಖಾವಾರು ಅಧಿಕಾರಿ, ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಕಂದಾಯ ಇಲಾಖೆ, ಕೃಷಿ ಇಲಾಖೆ, ತೋಟಗಾರಿಕೆ, ಪಶುಸಂಗೋಪನೆ ಇಲಾಖೆ, ಆರೋಗ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ರೇಷ್ಮೆ ಇಲಾಖೆ, ತೋಟಗಾರಿಕೆ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆ, ಅಬಕಾರಿ ಇಲಾಖೆ, ಅರಣ್ಯ ಇಲಾಖೆ, ಮತ್ತು ಇತರ ಇಲಾಖೆಗಳಿಗೆ ಸೇರಿದ ಕೌಂಟರ್ ತೆರೆದು ಸಾರ್ವಜನಿಕರಿಂದ ಅರ್ಜಿಗಳನ್ನು ಸ್ವೀಕರಿಸಲಾಯಿತು. ಪಿಂಚಣಿ ಸೌಲಭ್ಯ ಸೇರಿದಂತೆ ಕೆಲವೊಂದನ್ನು ಅಹವಾಲುಗಳಿಗೆ ಸ್ಥಳದಲ್ಲಿಯೇ ಪರಿಹರಿಸಲಾಯಿತು.

## ಬೆಳಕಿನ ಹಾದಿ

# ಪ್ರಾಮಾಣಿಕತೆಯೇ ಯಶಸ್ಸಿಗೆ ದಾರಿದೀಪ

■ ದೀಪಶ್ರೀ ಎಸ್ ಕೂಡ್ಲಿಗಿ



ಪ್ರಾಮಾಣಿಕತೆಯೊಂದಿದ್ದರೆ ಈ ಜಗತ್ತಿನಲ್ಲಿ ಯಾರು ಯಾರ ಮನಸ್ಸನ್ನಾದರೂ ಗೆಲ್ಲಬಹುದು. ಎಂತಹ ಕಠಿಣ ಸ್ಥಾನವನ್ನಾದರೂ ಅಲಂಕರಿಸಬಹುದು. ನಿಷ್ಠೆಯೊಂದಿದ್ದರೆ ತಮಗೆ ದೊರೆತ ಕೆಲಸದಲ್ಲಿ ವಿಫಲತೆ ದೊರೆತರೂ, ಮುಂದೊಮ್ಮೆ ಸಫಲತೆ ಜೊತೆಗೂಡುತ್ತದೆ. ಪ್ರಾಮಾಣಿಕತೆ ಎಂಬ ಶಾಶ್ವತ ಆಸ್ತಿಯೊಂದಿದ್ದರೆ, ಈ ಜಗದಲ್ಲಿ ಏನ್ನನ್ನಾದರೂ ಸಾಧಿಸಬಹುದು. ದ್ರೋಹಕ್ಕೆ ದಾಸರಾಗುವ ಬದಲು ಪ್ರಾಮಾಣಿಕತೆಗೆ ನಿಷ್ಠೆಯಿಂದಿರಿ. ಪ್ರಾಮಾಣಿಕತೆಗೆ ದೇವರು ಸಹ ಉತ್ತಮ ಅವಕಾಶ ಒದಗಿಸುತ್ತಾನೆ. ಎಂಬುದಕ್ಕೆ ಈ ಕಥೆ ಉತ್ತಮ ಉದಾಹರಣೆಯಾಗಿದೆ.

ಅವನೊಬ್ಬ ಶ್ರೀಮಂತ ಉದ್ಯಮಿ. ಸ್ವಯಂ ನಿವೃತ್ತಿಯ ವಯಸ್ಸು ಸಮೀಪಿಸಿತ್ತು. ಮುಂದೆ ತನ್ನ ಕಂಪನಿಯ ವ್ಯವಹಾರಗಳನ್ನು ನೋಡಿಕೊಳ್ಳಲು ಉತ್ತರಾಧಿಕಾರಿಯನ್ನು ಆಯ್ಕೆ ಮಾಡಬೇಕು ಎಂದು ಘೋಷಿಸಿದನು. ಅವನ ಮೂವರು ಮಕ್ಕಳಲ್ಲಿ ಈ ಕುರಿತು ಸ್ಪರ್ಧಾ ಮನೋಭಾವ ಏರ್ಪಟ್ಟಿತು. ಉತ್ತರಾಧಿಕಾರಿಯನ್ನು ಆಯ್ಕೆ ಮಾಡುವ ಕೆಲಸ ತಂದೆಯ ಹೆಗಲೇರಿತು. ತಂದೆ ಕೆಲಕಾಲ ಯೋಚಿಸಿ ನಿರ್ಧಾರ ತೆಗೆದುಕೊಂಡರು.

ಮರುದಿನ ಬೆಳಿಗ್ಗೆ ತಮ್ಮ ಮೂವರ ಮಕ್ಕಳನ್ನು ಕರೆದು, "ನಿಮಗೆ ತಲಾ ಒಂದೊಂದು ಬೀಜವನ್ನು ಕೊಡುತ್ತೇನೆ. ಇವು ತುಂಬಾ ವಿಶೇಷ ಬೀಜಗಳು. ನೀವು ಈ ಬೀಜಗಳನ್ನು ಬೇರೆ ಬೇರೆ ಜಾಗದಲ್ಲಿ ಬಿತ್ತಬೇಕು. ನೀರುಣಿಸಿ, ಗೊಬ್ಬರ ಹಾಕಿ ಪೋಷಿಸಿ, ಬೆಳೆಸಬೇಕು. ನಿಮಗೆ ಒಂದು ವರ್ಷದ ಕಾಲಾವಕಾಶ ನೀಡುತ್ತೇನೆ. ಅಷ್ಟರಲ್ಲಿ ನೀವು ಈ ಬೀಜಗಳನ್ನು ಪೋಷಿಸಿ, ಗಿಡಗಳನ್ನು ಬೆಳೆಸುವ ಆಧಾರದ ಮೇರೆಗೆ ನಿಮಗೆ ಉತ್ತರಾಧಿಕಾರತ್ವದ ಹಕ್ಕು ನೀಡುತ್ತೇನೆ" ಎಂದರು.


ಮೂವರು ಮಕ್ಕಳು ಬೀಜವನ್ನು ಬಿತ್ತಿ ನೀರು, ಗೊಬ್ಬರ ಹಾಕಿ ಬೆಳೆಸಲಾರಂಭಿಸಿದರು. ಮೂವರು ಪ್ರತಿನಿತ್ಯವೂ ಗಿಡಗಳ ಬೆಳವಣಿಗೆ ಕುರಿತು ಅವಲೋಕಿಸುತ್ತಿದ್ದರು. ಹೀಗೆ ಎರಡು ತಿಂಗಳು ಕಳೆಯಿತು. ಮೊದಲೆರಡು ಮಕ್ಕಳಿಬ್ಬರು ಗಿಡಗಳ ಬೆಳವಣಿಗೆ ಬಗ್ಗೆ ಮಾತನಾಡಲಾರಂಭಿಸಿದರು. ಮೂರನೇಯವನ ಗಿಡ ಒಂಚೂರು ಬೆಳೆದಿರಲಿಲ್ಲ. ಹೀಗಾಗಿ ಅವನು ಮೌನವಹಿಸುತ್ತಿದ್ದ. ವರ್ಷಗಳುರುಳಿದವು ಗಿಡಗಳನ್ನು ಪರಿಶೀಲಿಸಲು ಸ್ವತಃ ತಂದೆಯೇ ಆಗಮಿಸಿದರು. ಮೊದಲ ಹಾಗೂ ಎರಡನೇ ಮಕ್ಕಳ ಗಿಡಗಳು ಸಮೃದ್ಧವಾಗಿ ಬೆಳೆದಿದ್ದವು. ಮೂರನೇ ಮಗನ ಗಿಡ ಮೊಳಕೆಯನ್ನು ದಾಟಿರಲಿಲ್ಲ. ಮೂರನೇಯ ಮಗನತ್ತ ತಿರುಗಿದ ತಂದೆ, "ಇವನೇ ನಮ್ಮ ಕಂಪನಿಯ ಮುಂದಿನ ಉತ್ತರಾಧಿಕಾರಿ" ಎಂದು ಹೇಳಿದರು. ಮಕ್ಕಳೆಲ್ಲರಿಗೂ ನಂಬಲು ಸಾಧ್ಯವಾಗಲಿಲ್ಲ ಪ್ರಶ್ನಿಸಿದರು. ಮೊದಲೆರಡನೇ ಮಕ್ಕಳು "ಏನು ಬೆಳೆಸದ ಇವನಿಗೇಕೆ ಕಂಪನಿಯ ಯಜಮಾನನ ಪಟ್ಟ" ಎಂದರು.

ನಸುನಕ್ಕ ತಂದೆ ಹೇಳಿದ, "ಒಂದು ವರ್ಷದ ಹಿಂದೆ ನನ್ನ ಹಳೆಯ ಕೋಣೆಯಲ್ಲಿದ್ದ ಬೀಜಗಳನ್ನು ನಿಮಗೆ ಕೊಟ್ಟಿದ್ದೆ. ಅದನ್ನು ಬಿತ್ತಿ, ನೀರು, ಗೊಬ್ಬರ ಹಾಕಿ ಬೆಳೆಸಿ, ವರ್ಷದ ತರುವಾಯ ನನಗೆ ತಿಳಿಸಲು ಹೇಳಿದೆ. ಆದರೆ ಅದರ ಹಿಂದಿನ ರಹಸ್ಯವೇನೆಂದರೆ ನಾನು ನಿಮಗೆ ನೀಡಿದ ಬೀಜಗಳು ಬೇಯಿಸಿದ ಬೀಜಗಳು. ಇವುಗಳ ಆಯಸ್ಸು ಮುಗಿದು ಹೋಗಿರುತ್ತದೆ. ಹೀಗಿರುವಾಗ ಈ ಬೀಜಗಳು ಮೊಳಕೆಯೊಡೆಯುವುದೇ ಕನಸಿನ ಮಾತಾಗಿರುವಾಗ, ಗಿಡವಾಗಲು ಹೇಗೆ ಸಾಧ್ಯ. ನೀವಿಬ್ಬರು ಬೇರೆ ಬೀಜಗಳನ್ನು ಬಿತ್ತಿ,ಬೆಳೆಸಿ ನನಗೆ ನಂಬಿಕೆ ದ್ರೋಹ ಎಸಗಿರುವಿರಿ. ಅದಕ್ಕಾಗಿ ನಿಮಗೆ ಮುಂದಿನ ಉತ್ತರಾಧಿಕಾರಿಯಾಗುವ ಯಾವ ಅರ್ಹತೆಯು ಇಲ್ಲ ".ಎನ್ನುತ್ತಾ ಮೂರನೇ ಮಗನಿಗೆ ಉತ್ತರಾಧಿಕಾರತ್ವದ ಹಕ್ಕನ್ನು ವರ್ಗಾಯಿಸಿದರು.

# ಅಧಿಕಾರಿಗಳು ಶಾಸಕರು ಒಗ್ಗೂಡಿದರೆ ಅಭಿವೃದ್ಧಿ

# ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ

## ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ ಯಲ್ಲಿ ಸಚಿವ ಜಮೀರ್ ಅಹ್ಮದ್ ಖಾನ್ ಹೇಳಿಕೆ



**ಹಂಪಿ ಟೈಮ್ಸ್ ಹೊಸಪೇಟೆ**

ಶಾಸಕಾಂಗದ ಜೊತೆ ಕಾರ್ಯಾಂಗವು ಕೈ ಜೋಡಿಸಿದರೆ ಮಾತ್ರ ದೇಶ, ರಾಜ್ಯ, ಜಿಲ್ಲೆಯ ಅಭಿವೃದ್ಧಿ ಸಾಧ್ಯ, ಎಲ್ಲಾ ಇಲಾಖೆಯ ಅಧಿಕಾರಿಗಳು ಜಿಲ್ಲೆಯ ಅಭಿವೃದ್ಧಿಗಾಗಿ ಜವಾಬ್ದಾರಿಯಿಂದ ಕೆಲಸ ಮಾಡಬೇಕು ಎಂದು ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಸಚಿವರು ಹಾಗೂ ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಝೆಡ್ ಜಮೀರ್ ಅಹ್ಮದ್ ಖಾನ್ ಅವರು ಅಧಿಕಾರಿಗಳಿಗೆ ಕಟ್ಟು ನಿಟ್ಟಿನ ಎಚ್ಚರಿಕೆ ನೀಡಿದರು.

ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಆಗಸ್ಟ್ 14ರಂದು ನಡೆದ ವಿಜಯನಗರ ಜಿಲ್ಲಾ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಅನ್ನಭಾಗ್ಯ ಯೋಜನೆಯ ಬಗ್ಗೆ ಮಾಹಿತಿ ಕೇಳಿದ ಅವರು ಸಾರ್ವಜನಿಕರಿಗೆ ಸರಿಯಾಗಿ ಪಡಿತರ ಸಿಗುತ್ತಿದೆಯಾ? ಪಡಿತರ ಕಳ್ಳ ಸಾಗಾಣಿಕೆಯ ಬಗ್ಗೆ ಬಹಳ ದೂರುಗಳು ಬರುತ್ತಿವೆ ಅದರ ಬಗ್ಗೆ ಸರಿಯಾದ ನಿಗವಹಿಸಿ ಎಂದರು.

ಗೃಹ ಜ್ಯೋತಿ ಯೋಜನೆ ಪ್ರಗತಿಯ ವಿವರಗಳನ್ನು ಕೇಳಿದ ಸಚಿವರಿಗೆ ಯೋಜನೆಯಡಿ ನೊಂದಾಯಿಸಿದ ಫಲಾನುಭವಿಗಳಲ್ಲಿ 90% ಪ್ರಗತಿಯಾಗಿದೆ ಎಂದು ಅಧಿಕಾರಿಗಳು ವಿವರಿಸಿದರು. ಗೃಹಲಕ್ಷ್ಮೀ ಯೋಜನೆಯ ಹಣ ಸರಿಯಾಗಿ ಜನರಿಗೆ ತಲುಪಿಸಿ, ಎಷ್ಟು ತಿಂಗಳು ಕಂತು ಬಾಕಿ ಇದೆ? ಮೂರು ನಾಲ್ಕು ತಿಂಗಳಿಂದ ಗೃಹ ಲಕ್ಷ್ಮೀ ಹಣವೇ ಬಂದಿಲ್ಲ ಎನ್ನುವ ಬಹಳ ದೂರುಗಳು ಬಂದಿವೆ, ಜನಸಾಮನ್ಯರು ಬಹಳ ನಿರೀಕ್ಷೆ ಇಟ್ಟುಕೊಂಡಿದ್ದಾರೆ ಅವರಿಗೆ ಸರಿಯಾಗಿ ಹಣ ತಲುಪಿಸುತ್ತಿದ್ದಿರಾ ಎಂದು ಸಚಿವರು ಪ್ರಶ್ನಿಸಿದರು.

ಈಗಾಗಲೇ ಹಣ ಜಮೆ ಮಾಡಲಾಗುತ್ತಿದೆ. ಏಪ್ರಿಲ್ ಮೇ ಜೂನ್ ಜುಲೈ ಗೃಹಲಕ್ಷ್ಮೀ ಯೋಜನೆ ಹಣ ಬರಬೇಕು. ಖಜಾನೆಯಲ್ಲಿ ಹಣ ಇದ್ದು, ಫಲಾನುಭವಿಗಳ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಬೇಕಿದೆ ಎಂಬ ಮಾಹಿತಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ನೀಡಿದರು.

ಶಕ್ತಿಯೋಜನೆ,ಯುವನಿಧಿ ಯೋಜನೆಯ ಬಗ್ಗೆ ಕೂಡ ಇದೆ ವೇಳೆ ಸಚಿವರು ವಿಚಾರಿಸಿದರು. ಕೃಷಿ ಇಲಾಖೆ ಎಷ್ಟು ಪ್ರದೇಶದಲ್ಲಿ ಬೆಳೆ ರೈತರು ಬೆಳೆದಿದ್ದಾರೆ, ರೈತರಿಗೆ ಸರಿಯಾಗಿ ಗೊಬ್ಬರ, ಬೀಜಗಳನ್ನು ತಲುಪಿಸಬೇಕು. ತೋಟಗಾರಿಕೆ ಇಲಾಖೆಯಲ್ಲಿ ಚೆಂಡುಹೂ, ಸೇವಂತಿಗೆ ಹೂಗಳಿಗೆ ಸಹ ಬೆಳೆ ಪರಿಹಾರ ನೀಡಿಬೇಕು. ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಇದ್ದಲ್ಲಿ ಅದನ್ನು ಸರಿ ಪಡಿಸಿಕೊಳ್ಳಿ. ಪಶುಸಂಗೋಪನೆ ಇಲಾಖೆಯಲ್ಲಿರುವ ವಿವಿಧ ಯೋಜನೆಗಳ ಸೌಲಭ್ಯಗಳು ಜನರಿಗೆ ಸಿಗುವಂತೆ ಮಾಡಬೇಕು. ಕುರಿಗಳು ಸತ್ತ ಸ್ಥಳದಲ್ಲಿ ಅಧಿಕಾರಿಗಳು ನೇರವಾಗಿ ಹೋಗಿ ಪರಿಶೀಲಿಸಿ ಪರಿಹಾರ ನೀಡಲು ಕ್ರಮ ಕೈಗೊಳ್ಳಬೇಕು. ಕುರಿ ಸತ್ತರೆ 5 ಸಾವಿರ ಪರಿಹಾರ ಇದೆ ಅದನ್ನು ಕುರಿಗಾಹಿಗಳಿಗೆ ಸರಿಯಾಗಿ ತಲುಪಿಸಿ ಎಂದು ಸೂಚಿಸಿದರು.

ಸಂಸದರಾದ ಇ.ತುಕಾರಾಂ ಅವರು ಮಾತನಾಡಿ, ಅಧಿಕಾರಿಗಳು ತಿಂಗಳಿಗೊಮ್ಮೆ ಶಾಸಕರನ್ನ ಭೇಟಿ ಮಾಡಿ ಏನಾದರು ಸಮಸ್ಯೆ ಇದ್ದರೆ ಚರ್ಚೆ ಮಾಡಿ ಪರಿಹರಿಸಿಕೊಳ್ಳಬೇಕು. ಗ್ರಾಮ ಪಂಚಾಯತಿ ಪಿ.ಡಿ.ಒಗಳು ಇನ್ನುಮುಂದೆ ಡೈರಿಗಳನ್ನು ನಿರ್ವಹಣೆ ಮಾಡಬೇಕು. ಎರಡು ಪಂಚಾಯತಿಗೆ ಕೆಲಸ ಮಾಡುವಾಗ ಪಂಚತಂತ್ರ–2 ನಲ್ಲಿ ಕಡ್ಡಾಯವಾಗಿ ಹಾಜರಾತಿ ಹಾಕಬೇಕು. ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಸರಿಯಾಗಿ ಮೂಲಭೂತ ಸೌಕರ್ಯಗಳು ದೊರೆಯುಂತೆ ಮಾಡಬೇಕು.

ಜಿಲ್ಲೆಯ ಎಸ್‌ಎಸ್‌ಎಲ್‌ಸಿಯ ಪಲಿತಾಂಶ ಸುಧಾರಣೆಗಾಗಿ ಶಿಕ್ಷಣ ಇಲಾಖೆ ಅಧಿಕಾರಿಗಳು ಕ್ರಮ ವಹಿಸಿ.

ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿಸಿದ ಫಲಾನುಭವಿಗಳಿಗೆ ಸರಿಯಾದ ರೀತಿಯಲ್ಲಿ ಸೌಲಭ್ಯ ದೊರೆಯುವಂತೆ ಜನರಿಗೆ ತಲುಪಿಸುವ ಕೆಲಸ ಮಾಡಬೇಕು. ಬ್ರೋಕರ್‌ಗಳಿಗೆ ಬ್ರೇಕ್ ಹಾಕಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಸಭೆಯಲ್ಲಿ ಶಾಸಕರುಗಳಾದ ಹೆಚ್.ಆರ್. ಗವಿಯಪ್ಪ, ನೇಮಿರಾಜ ನಾಯ್ಕ, ಡಾ.ಶ್ರೀನಿವಾಸ, ಕೃಷ್ಣಾ ನಾಯ್ಕ, ಎಂ.ಪಿ.ಲತಾ ಮಲ್ಲಿಕಾರ್ಜುನ, ಎಲ್.ಕೃಷ್ಣನಾಯ್ಕ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಧ್ಯಕ್ಷರಾದ ಎಸ್.ಆರ್ ಮನೋಹರ್ ರಾವ್, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ನವೀನ್‌ರಾಜ್ ಸಿಂಗ್, ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ, ಜಿಲ್ಲಾ ಪಂಚಾಯಿತ್ ಮುಖ್ಯಕಾರ್ಯನಿರ್ವಾಹಕಅಧಿಕಾರಿಗಳಾದ ನೊಂಗ್ಜಾಯ್ ಮೊಹಮ್ಮದ್ ಅಕ್ರಮ ಅಲಿ ಷಾ, ಜಿಲ್ಲಾ ಪೊಲೀಸ್ ವಿಷ್ಠಾಧಿಕಾರಿಗಳಾದ ಶ್ರೀಹರಿ ಬಾಬು ಬಿ.ಎಲ್., ಪ್ರಾದೇಶಿಕ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾದ ಅರ್ಸಲನ್ ಹಾಗೂ ವಿವಿಧ ತಾಲ್ಲೂಕುಗಳ ತಹಶಿಲ್ದಾರರು, ತಾಪಂ ಇಓಗಳು ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi

ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಇಂಗ್ಲಿಷ್

www.hampitimes.com - Hampi Times Margadarshi

# Prose -2 : There is A Girl by the Tracks

**Most important 2 marks questions with answers**

**1. Why had Roma fallen by the tracks? (2018 June)**

Ans : The train hurtled ahead and Roma was jammed between other women. She got pushed and lost her tenuous foothold and panicked. Roma was thrown out of the coach. She fell by the tracks, bleeding all alone.

**2. What did Baleshwar Mishra do as soon as he saw the girl lying by the tracks?**

Ans : On seeing the girl by the tracks, Baleshwar immediately pulled the red emergency chain of the train. As the train slowed, he asked the other passengers to come with him to help the girl. No one came forward. Then Baleshwar bravely jumped off the still-moving train and rushed towards the girl.

**3. What happened to Baleshwar as he jumped off the still-moving train?**

Ans : When Baleshwar jumped off the still-moving train, he fell and hurt his ankle. The sole of his rubber slipper was torn off. Fortunately, there was no real damage though a burst of pain shot up his ankle. However, Baleshwar ignored his own pain to go in search of the fallen girl.

**4. Who volunteered to help Baleshwar? How did he help?**

Ans : A tempo truck driver stopped when he saw Bale shwar standing by the road holding the injured girl in his arms. He helped him to lay the girl down in the back of his truck. He took her to the hospital for better treatment.

**5. Why did Baleshwar implore the truck driver to take her to the Divine Multi Speciality Hospital?**

Ans : The small hospital lacked personnel and equipment. The on-duty physician was not able to give more than the basic first aid. So he implored the truck driver to take her to near by Divine Multi Speciality Hospital.

**6. How did the doctors at Divine Multi-Specialty Hospital treat Roma?**

Ans: The Medical Director of the hospital saw the extent of Roma's injuries and immediately admitted her to the ICU without any paperwork. X-rays were taken and the doctors found that she needed surgery. She was taken care of very well and recovered soon.

**7. How can you say that Baleshwar had a good memory? Or "Baleshwar had a good memory." Do you agree?**

Ans : Yes, I can say that Baleshwar had a good memory while Roma was losing her consciousness again, he was able to memorize the cell phone number of her brother Dinesh which Roma said.

**8. After Roma's recovery, what did she say about Baleshwar?**

Ans: Roma was amazed to hear about the manner in which she had been rescued. She wondered how a stranger could jump off a train and risk his life for her. She could not imagine what would have happened to her if Baleshwar had not been there. She felt that she could never repay him for what he had done.

**9. Why did Baleshwar revisit the spot where Roma had fallen? (2020 April)**

Ans : Baleshwar revisited the spot where Roma had fallen to look for Roma's belongings. Her brother Dinesh Talreja had said that her cell phone and hand bag were missing.

**10. What values can we learn from the lesson, There is a girl by the Tracks. (2020 September)**

Ans : Love and compassion are the divine qualities, and they are the true religions.

Prepared by ; **R.B.Gurubasavaraj.** Asst Teacher. G.H.S.Basarakodu, H.B.Halli Taluk, Vijayanagara Dist

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055